ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 71 RNI Number : KNKAN/25/A2770 19-03-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :71 ರಾಯಚೂರು 19-03-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ಶಾಸಕರ ಭವನದಲ್ಲೂ ಗ್ಯಾಸ್ ಕೊರತೆ : ಪರಿಷತ್‌ನಲ್ಲಿ ಪ್ರತಿಧ್ವನಿ

ಬೆಂಗಳೂರು, ಮಾ.18- ದೇಶದ ವಿವಿಧೆಡೆ ಉಂಟಾಗಿರುವ ಅಡುಗೆ ಅನಿಲ ಕೊರತೆ ವಿಧಾನ ಪರಿಷತ್‌ನಲ್ಲೂ ಪ್ರತಿಧ್ವನಿಸಿ ಹಲವಾರು ದಿನಗಳಿಂದ ಸರಿಯಾಗಿ ಊಟ, ತಿಂಡಿ ಸಕಾಲಕ್ಕೆ ಸರಿಯಾಗಿ ಸಿಗುತ್ತಿಲ್ಲ ಎಂದು ಸದಸ್ಯರು ತಮ ನೋವು ಹೊರಹಾಕಿದ ಪ್ರಸಂಗ ಜರುಗಿತು. ದಿನದ ಕಲಾಪ ಆರಂಭವಾಗು ತ್ತಿದ್ದಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರಶ್ನೋತ್ತರ ಕಲಾಪವನ್ನು ಪ್ರಾರಂಭಿಸಲು ಮುಂದಾದರು.

ಈ ವೇಳೆ ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ ಅವರು ವಿಷಯ ಪ್ರಸ್ತಾಪಿಸಿ ಶಾಸಕರಿಗೆ ಶಾಸಕರ ಭವನ ಮತ್ತು ಹೋಟೆಲ್‌ಗಳಲ್ಲಿ ಸರಿಯಾದ ಊಟ-ತಿಂಡಿ ಸಿಗುತ್ತಿಲ್ಲ. ಕಳೆದ ಒಂದು ವಾರದಿಂದ ನಾವೆಲ್ಲಾ ಪರದಾಡುವಂತಾಗಿದೆ ಎಂದು ಅಸಮಾಧಾನ ಹೊರಹಾಕಿದರು.

ಕಡೆಪಕ್ಷ ಇಂದಿರಾಕ್ಯಾಂಟೀನ್‌ಗೆ ಹೋಗಿ ತಿನ್ನೋಣವೆಂದರೆ ಅಲ್ಲಿಯೂ ಗ್ಯಾಸ್ ಸಮಸ್ಯೆಯಿಂದ ಊಟ-ತಿಂಡಿ ಸಿಗುತ್ತಿಲ್ಲ. ಇದು ಕೇವಲ ಶಾಸಕರ ಸಮಸ್ಯೆಯಲ್ಲ. ಗ್ಯಾಸ್ ತೊಂದರೆಯಿಂದಾಗಿ ಜನರು ಆತಂಕಕ್ಕೆ ಒಳಗಾಗಿದ್ದಾರೆ. ದಯಮಾಡಿ ಸಮಸ್ಯೆಯನ್ನು ಪರಿಹರಿಸಿ ಎಂದು ಸರ್ಕಾರದಕ್ಕೆ ಮನವಿ ಮಾಡಿಕೊಂಡರು.

ಈ ವೇಳೆ ಸಭಾಪತಿ ಬಸವರಾಜ್ ಹೊರಟ್ಟಿ ಅವರು, ಅದಕ್ಕೆಲ್ಲ ಸರ್ಕಾರವೇ ಉತ್ತರ ಕೊಡಬೇಕು. 10 ನಿಮಿಷ ಅನುಮತಿ ಕೊಡುತ್ತೇನೆ ತಿಂದು ಬಾ ಎಂದು ಡಿಸೋಜಾಗೆ ಹೇಳಿದರು.ಅವರು ಹಸಿದು ಬಂದಿದ್ದಾರೆ, ದಯವಿಟ್ಟು ಇಡ್ಲಿ ವಡಾ ಕೊಡಿ ಎಂದು ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹಾಸ್ಯ ಚಟಾಕಿ ಹಾರಿಸಿದರೆ, ಇಡ್ಲಿ ವಡೆ ಸಿಗುತ್ತಿಲ್ಲ, ಏಕೆಂದರೆ ಗ್ಯಾಸ್ ಸಿಗುತ್ತಿಲ್ಲ ಎಂದ ಸಚಿವ ಜಮೀರ್ ಅಹದ್ ಹೇಳಿದರು.

ಮಾತು ಮುಂದುವರೆಸಿದ ಐವಾನ್ ಡಿಸೋಜಾ, ದರ ಜಾಸ್ತಿ ಮಾಡಿದ್ದಾರೆ ಸರ್ ಎಂದರು., ಇದು ಗ್ಯಾಸ್ ಟ್ರಬಲ್ ಕತೆ ಎಂದು ಸದಸ್ಯರುಗಳು ಪರೋಕ್ಷವಾಗಿ ಪ್ರತಿಪಕ್ಷದ ಸದಸ್ಯರ ಮೇಲೆ ಮಾತಿನ ಬಾಣ ಬಿಟ್ಟರು.



ನಿಮ್ಮೂರು ಸುದ್ದಿ

ಸಮಸ್ತ ನಾಡಿನ ಜನತೆಗೆ ನಿಮ್ಮೂರು ಸುದ್ದಿ ಪತ್ರಿಕೆಯ ವತಿಯಿಂದ ಯುಗಾದಿ ಹಬ್ಬದ ಶುಭಾಷಯಗಳು



ಶಿವನಗೌಡ ನಾಯಕ ವಿರುದ್ಧ ಪ್ರಕರಣ ದಾಖಲಿಸಿದರೆ ಹೋರಾಟ ತೀವ್ರ - ನರಸಿಂಹಲು

ರಾಯಚೂರು, ಮಾ.18-

ಮಾಜಿ ಸಚಿವ ಶಿವನಗೌಡ ನಾಯಕ ಅವರ ಮೇಲೆ ಪ್ರಕರಣ ದಾಖಲಿಸಿದರೆ ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಹೋರಾಟ ತೀವ್ರಗೊಳಿ ಸಲಾಗುವುದು ಎಂದು ಜಿಲ್ಲಾ ಸಂಚಾಲಕ

ಎಸ್ ನರಸಿಂಹಲು ಅವರು ಹೇಳಿದರು. ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡು ತ್ತಾ,ಇತ್ತೀಚಿಗೆ ಚಿತ್ರದುರ್ಗದಲ್ಲಿ ನಡೆದ ಎಸ್ಸಿ ಎಸ್ಟಿ ಸಮಾವೇಶದಲ್ಲಿ ಮಾಜಿ ಸಚಿವ ಶಿವನಗೌಡ ನಾಯಕ ಅವರು ಹೆಚ್ ಸಿ ಮಹಾದೇವಪ್ಪ ಅವರು ಸಿಕ್ಕರೆ ಕಪಾಳ ಮೋಕ್ಷ ಮಾಡುತ್ತೇನೆ ಎಂದು ಹೇಳಿಕೆ ನೀಡಿ ರು ವುದು ಆಕ್ರೋಶ ಭರಿತ ಹೇಳಿಕೆ ಹೊರತು ಅವರ ಮೇಲೆ ಉದ್ದೇಶ ಪೂರ್ವಕವಾಗಿ ಮಾತನಾಡಿಲ್ಲ ಎಂದರು. ಹೆಚ್ ಸಿ ಮಹಾದೇವಪ್ಪ



ಅವರ ಪರ ಕೆಲವರು ಈಗಾಗಲೇ ಶಿವನಗೌಡ ನಾಯಕರ ಮೇಲೆ ದೂರು ನೀಡಿದ್ದು,ಅದು ಅವರ ವೈಯುಕ್ತಿಕ ವಿಚಾರ ಆದರೆ ಶಿವನ ಗೌಡ ಅವರ ಮೇಲೆ ಪ್ರಕರಣ ದಾಖ ಲಿಸಿದರೆ ಜಿಲ್ಲೆಯಲ್ಲಿ ಹೋರಾಟ ತೀವ್ರ ಸ್ವರೂಪ ನಡೆಯಲಿದೆ ಎಂದು ಎಚ್ಚರಿಕೆ ನೀಡಿದರು. ಈ ಹೋರಾಟ ದಲ್ಲಿ ಇದರಲ್ಲಿ ಏನಾದರೂ ಅನಾ ಹುತ ಸಂಭವಿಸದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ರಾಜ್ಯ ಸರ್ಕಾರದ ಮುಖ್ಯ ಹೊಣೆಗಾರಿಕೆ ಎಂದು ಎಚ್ಚರಿಕೆ ನೀಡಿದರು. ಜಿಲ್ಲೆ ಪೊಲೀಸ್ ಇಲಾಖೆ ಶಾಂತಿ ಸುವ್ಯ ವಸ್ಥೆಯಲ್ಲಿ ಕಾಪಾಡುವ ನಿಟ್ಟಿನಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು.ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ 30 ವರ್ಷಗಳ ಸುಧೀರ್ಘ ಹೋರಾಟವನ್ನು ಪರಿಗ ಣಿಸದೆ ಹಳೆ ಮೀಸಲಾತಿ ಅನ್ವಯ 50 ಸಾವಿರ ಹುದ್ದೆಗಳ ಭರ್ತಿಗೆ ಮುಂ ದಾಗಿರುವುದು ಮಾದಿಗ ಸಮುದಾ ಯಕ್ಕೆ ಮರಣಶಾಸನ ಬರೆಯಲು ಹೊರಟಿದೆ. ರಾಜ್ಯಪಾಲರು ಅಂಕಿತ ಹಾಕಿದ್ದರು ಸಿದ್ದರಾಮಯ್ಯ ನೇತೃ ತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಮಾದಿಗ ಸಮುದಾಯಕ್ಕೆ ತೀವ್ರ ದ್ರೋಹ ಬಗೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾದಿಗ ಸಮುದಾಯದ ಜನರು ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಕಳೆದ 30 ವರ್ಷಗಳ ಸುಧೀರ್ಘ ಹೋರಾಟ ನಡೆಸಿದ ಪ್ರತಿಫಲ ಸುಪ್ರೀಂ ತೀರ್ಪು ಮಹತ್ವ ತೀರ್ಪು

ಮೂರನೇಯ ಪುಟಕ್ಕೆ

ಜಿಲ್ಲಾಡಳಿತದಿಂದ ಮಾರ್ಚ್ 23ರಂದು ದೇವರ ದಾಸಿಮಯ್ಯ ಜಯಂತಿ

ರಾಯಚೂರು ಮಾ.18

ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯು ಕ್ತಾಶ್ರಯದಲ್ಲಿ ಆದ್ಯ ವಚನಕಾರ ನೇಕಾರ ಸಂತ ವಿಶ್ವಮಾನ್ಯ ಶರಣ ದೇವರ ದಾಸಿಮಯ್ಯ ಅವರ ಜಯಂ ತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂ ದಿರದಲ್ಲಿ ಮಾರ್ಚ್ 23ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತು ವಾರಿ ಸಚಿವರಾದ ಡಾ.ಶರಣಪ್ರ ಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂ ತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃ ದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕ ರಾದ ಜೆ.ಟಿ.ಪಾಟೀಲ್, ರಾಯ ಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜ ಶೇಖರ ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾ ರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿ ಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯ ಚೂರು ಜಿಲ್ಲಾ ಉಸ್ತುವಾರಿ ಕಾರ್ಯ ದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾ ರಿಗಳಾದ ಈಶ್ವರ ಕುಮಾರ್ ಕಾಂ

ಮೂರನೇಯ ಪುಟಕ್ಕೆ

ಆತಂಕ, ಭಯವಿಲ್ಲದೆ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ: ತಿಪ್ಪರಾಜು ಹವಾಲ್ದಾರ್

ರಾಯಚೂರು,ಮಾ. 18-

ರಾಜ್ಯಾದ್ಯಂತ ಇಂದಿನಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ಆರಂಭವಾದ ಹಿನ್ನೆಲೆ, ರಾಯಚೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಚಂದ್ರಬಂಡಾ ಪ್ರೌಢಶಾಲೆಗೆ ಮಾಜಿ ಶಾಸಕ ತಿಪ್ಪರಾಜು ಹವಾಲ್ದಾರ್ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಪರೀಕ್ಷೆಗೆ ಹಾಜರಾಗುತ್ತಿದ್ದ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದ ಅವರು, ಸಿಹಿ ಹಾಗೂ ಪೆನ್‌ಗಳನ್ನು ಹಾಗೂ ಗುಲಾಬಿ ಹೂ ವಿತರಿಸುವ ಮೂಲಕ ಪ್ರೋತ್ಸಾಹ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಯಾವುದೇ ರೀತಿಯ ಆತಂಕ, ಭಯ ಗಳ ಈ



ಒಳಗಾಗದೆ ಆತ್ಮವಿಶ್ವಾಸದಿಂದ ಪರೀಕ್ಷೆಗಳನ್ನು ಎದುರಿಸಬೇಕು ಎಂದು ತಿಳಿಸಿದರು. ಇಷ್ಟೊತ್ತಿಗೇ ಮಾಡಿದ ಪರಿಶ್ರಮವೇ ನಿಮ್ಮ ಯಶಸ್ಸಿಗೆ ದಾರಿ ತೋರಲಿದೆ. ಆದ್ದರಿಂದ ಮನಸ್ಸನ್ನು ಶಾಂತವಾಗಿಟ್ಟುಕೊಂಡು ಪ್ರಶ್ನೆಪತ್ರಿಕೆಯನ್ನು ಗಮನದಿಂದ ಓದಿ, ಗೊತ್ತಿರುವ ಪ್ರಶ್ನೆಗಳಿಗೆ ಸರಿಯಾದ ಕ್ರಮದಲ್ಲಿ ಉತ್ತರಗಳನ್ನು ಬರೆಯಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪರೀಕ್ಷೆಯ ಸಮಯದಲ್ಲಿ ಆತುರ ಪಡುವುದು ಬೇಡ, ಸಮಯ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಮೊದಲು ಸುಲಭವಾದ ಪ್ರಶ್ನೆಗಳನ್ನು ಆಯ್ಕೆ ಮಾಡಿ, ನಂತರ ಕಷ್ಟವಾದ ಪ್ರಶ್ನೆಗಳತ್ತ ಗಮನ

ಮೂರನೇಯ ಪುಟಕ್ಕೆ

ಅಂಬೇಡ್ಕರ್ ವೃತ್ತದಲ್ಲಿ ಶಿವನಗೌಡ ನಾಯಕ ಚಿತ್ರ ದಹಿಸಿ ಪ್ರತಿಭಟನೆ , ಡಿಎಸ್‌ಪಿ ಮೂಲಕ ಮನವಿ ಸಲ್ಲಿಕೆ



ರಾಯಚೂರು,ಮಾ.18-

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ (ರಿ), ಜಿಲ್ಲಾ ಸಮಿತಿ ರಾಯಚೂರು ವತಿಯಿಂದ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹಾದೇವಪ್ಪ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಹಿನ್ನೆಲೆ ದೇವದುರ್ಗದ ಮಾಜಿ ಶಾಸಕ ಕೆ. ಶಿವನಗೌಡ ನಾಯಕ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ನಗರದ ಡಾ. ಬಾಬಾಸಾಹೇಬ ಅಂಬೇಡ್ಕರ್ ವೃತ್ತದಲ್ಲಿ ಭಾವಚಿತ್ರ ದಹಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ನಂತರ ಒಕ್ಕೂಟದ ಮುಖಂಡರು ಡಿಎಸ್‌ಪಿ ಕುಮಾರಸ್ವಾಮಿ ಅವರ ಮೂಲಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ರಾಜ್ಯ ಗೃಹ ಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದರು.


ಚಿತ್ರದುರ್ಗದಲ್ಲಿ ನಡೆದ ಎಸ್‌ಸಿ/ಎಸ್‌ಟಿ ಜನಾಂದೋಲನ ಸಭೆಯಲ್ಲಿ ಸಚಿವರ ವಿರುದ್ಧ ಪ್ರಚೋದನಾತ್ಮಕ ಹೇಳಿಕೆ ನೀಡಲಾಗಿದೆ ಎಂದು ಆರೋಪಿಸಿದ ಮುಖಂಡರು, ''ಸಚಿವರು ಎದುರು ಸಿಕ್ಕರೆ ಹಲ್ಲೆ ಮಾಡುತ್ತೇನೆ'' ಎಂಬ ಹೇಳಿಕೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಇದು ಸಮಾಜದಲ್ಲಿ ದ್ವೇಷ ಮತ್ತು ಅಶಾಂತಿ ಉಂಟುಮಾಡುವ ಪ್ರಯತ್ನವಾಗಿದೆ ಎಂದು ದೂರಿದರು.

ಈ ಸಂಬಂಧ ಈಗಾಗಲೇ ಮಾರ್ಚ್ 10ರಂದು ದೂರು ಸಲ್ಲಿಸಲಾಗಿದ್ದು, ಅದರ ಆಧಾರದ ಮೇಲೆ ರಾಯಚೂರು ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದರು.

ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ ಅವರು ಅನುಭವಸಂಪನ್ನ ನಾಯಕರು ಆಗಿದ್ದು, ಅವರ ವಿರುದ್ಧ ವೈಯಕ್ತಿಕ ರಾಜಕೀಯ ದುರುದ್ದೇಶದಿಂದ ಈ ರೀತಿಯ ಹೇಳಿಕೆ ನೀಡಿರುವುದು

ಮೂರನೇಯ ಪುಟಕ್ಕೆ

ಭಗವಾನ್ ಮಹಾವೀರ ಜಯಂತಿ ಆಚರಣೆ; ಪೂರ್ವಭಾವಿ ಸಿದ್ಧತಾ ಸಭೆ



ರಾಯಚೂರು,ಮಾ.18

ಇಲ್ಲಿನ ಜಿಲ್ಲಾಡಳಿತದಿಂದ ಇದೇ ಮಾರ್ಚ್ 31ರ ಮಂಗಳವಾರ ದಂದು ಸರ್ಕಾರದ ಆದೇಶದಂತೆ ಭಗವಾನ್ ಮಹಾವೀರ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಾರ್ಚ್ 17ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಭಗವಾನ್ ಮಹಾವೀರ ಜಯಂತಿ ಕುರಿತು ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಗವಾನ್ ಮಹಾವೀರ ಅವರ ಭಾವಚಿತ್ರಕ್ಕೆ ಪುಷ್ಪಹಾರ ಸಮರ್ಪಣೆ, ಪುಷ್ಪ ನಮನಗಳನ್ನು ಸಲ್ಲಿಸಿದ ಬಳಿಕ ಅಂದು ಬೆಳಿಗ್ಗೆ 08:30ಕ್ಕೆ ನಗರದ ಜೈನ್ ಮಂದಿರದಿಂದ ಮೆರವಣಿಗೆ ಹೊರಟು ಸೂಪರ್ ಮಾರ್ಕೆಟ್, ತೀನ್ ಕಂದಿಲ್, ಬಟ್ಟೆ ಬಜಾರ್, ಮಹಾವೀರ ವೃತ್ತದ ಮುಖಾಂತರ ಜೈನ್ ಮಂದಿರಕ್ಕೆ ಬಂದು ಸೇರಲಿದೆ. ನಂತರ ಬೆಳಿಗ್ಗೆ 11 ಗಂಟೆಗೆ ಜೈನ್ ಮಂದಿರದ ಆರಾಧನ ಸಭಾ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಮೆರವಣಿಗೆ ಮತ್ತು ವೇದಿಕೆಯ ಕಾರ್ಯಕ್ರಮಕ್ಕೆ ಸಂಬಧಿಸಿದ ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಭಗವಾನ್ ಮಹಾವೀರ ಅವರ ವೃತ್ತವನ್ನು ಅಲಂಕಾರಗೊಳಿಸಬೇಕು. ವಿದ್ಯುತ್ ದೀಪಾಲಂಕಾರ ಮಾಡಬೇಕು. ಶಾಮಿಯಾನ, ಆಸನಗಳು, ಧ್ವನಿವರ್ಧಕ, ಕುಡಿಯುವ ನೀರು, ರಥದ ಸಿದ್ಧತೆ ಹಾಗೂ ಜೈನ್ ಮಂದಿರ ಸುತ್ತ-ಮುತ್ತ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕರ್ ಇತ್ಯಾದಿ ವ್ಯವಸ್ಥೆಗಳನ್ನು ರಾಯಚೂರು ಮಹಾನಗರ ಪಾಲಿಕೆಯ ಸಂಬಧಿಸಿದ ಅಧಿಕಾರಿಗಳು ಮಾಡಬೇಕೆಂದು ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಶ್ರೀಮತಿ ಪ್ರೇಮಲತಾ ಹರದರೆ ರಾಯಚೂರು ಅವರಿಂದ ಉಪನ್ಯಾಸ ನಡೆಸಲು ಸಭೆಯಲ್ಲಿ ಒಮ್ಮತದ ತೀರ್ಮಾನ ಮಾಡಲಾಯಿತು.

ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಶಿಷ್ಟಾಚಾರದಂತೆ ಮುದ್ರಿಸಿ ವಿತರಿಸಲು ಸೂಚನೆ ನೀಡಲಾಯಿತು.

ಜಯಂತಿ ಆಚರಣೆಯನ್ನು ಎಲ್ಲಾ ಇಲಾಖೆಗಳಲ್ಲಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಆಚರಿಸಲು ಸಂಬಧಿಸಿದ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕೆಂದು ಸಂಬಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು

ಮೂರನೇಯ ಪುಟಕ್ಕೆ

ಹಿಂದುಳಿದ ವರ್ಗ ಮಹಿಳೆಯರಿಗೂ ಲ್ಯಾಪ್‌ಟಾಪ್ ಯೋಜನೆ ವಿಸ್ತರಣೆ ಮಾಡಲಿ-ಪಿ. ಸುರೇಖಾ ಆಗ್ರಹ

ರಾಯಚೂರು,ಮಾ.18-

ರಾಜ್ಯ ಬಜೆಟ್‌ನಲ್ಲಿ ಮಹಿಳಾ ಸಬಲೀಕರಣದ ಉದ್ದೇಶದಿಂದ ಕೆಲವು ಸಮುದಾಯಗಳ ವಿದ್ಯಾವಂತ ಮಹಿಳೆಯರಿಗೆ 50,000 ಲ್ಯಾಪ್‌ಟಾಪ್‌ಗಳನ್ನು ವಿತರಿಸುವ ಘೋಷಣೆಯನ್ನು ಸ್ವಾಗತಿಸಿದ ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದ ಮಹಿಳಾ ಘಟಕ, ಈ ಯೋಜನೆಯನ್ನು ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ವರ್ಗದ ವಿದ್ಯಾರ್ಥಿನಿಯರಿಗೂ ವಿಸ್ತರಿಸಬೇಕೆಂದು ಒತ್ತಾಯಿಸಿದೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಉಪಾಧ್ಯಕ್ಷೆ ಪಿ. ಸುರೇಖಾ ಅವರು, ಪ್ರವರ್ಗ-1 ಹಾಗೂ 2(ಎ) ಒಳಪಡುವ ಹಿಂದುಳಿದ ಜಾತಿಗಳ ಪ್ರತಿಭಾವಂತ ಮಹಿಳೆಯರಿಗೂ ಲ್ಯಾಪ್‌ಟಾಪ್ ಸೌಲಭ್ಯ ಒದಗಿಸಬೇಕು ಎಂದು ಹೇಳಿದರು.



ಹಿಂದುಳಿದ ವರ್ಗಗಳ ಮತಗಳು ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರೂ, 2026-27ರ ಬಜೆಟ್‌ನಲ್ಲಿ ಈ ವರ್ಗಗಳಿಗೆ ಸಂಬಂಧಿಸಿದ ವಿಶೇಷ ಯೋಜನೆಗಳ ಕೊರತೆ ಕಂಡುಬಂದಿರುವುದು ಬೇಸರದ ಸಂಗತಿ ಎಂದು ಅವರು ಅಭಿಪ್ರಾಯಪಟ್ಟರು.

ಇದೇ ವೇಳೆ ಜಿಲ್ಲೆಯ ಬಾಲಕಿಯರ ಶಿಕ್ಷಣಾಭಿವೃದ್ಧಿಗಾಗಿ ಮೆಟ್ರಿಕ್ ಪೂರ್ವ ಮತ್ತು ನಂತರ ಸೇರಿ ನಾಲ್ಕು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಂತೆ ಈಗಾಗಲೇ ಮನವಿ ಸಲ್ಲಿಸಿದ್ದರೂ, ಜಿಲ್ಲೆಗೆ ಯಾವುದೇ ಹೊಸ ವಿದ್ಯಾರ್ಥಿನಿಲಯ ಮಂಜೂರಾಗದಿರುವುದು ವಿಷಾದನೀಯವಾಗಿದೆ ಎಂದರು.

ಮುಂದಿನ ಪೂರಕ ಆಯವ್ಯಯದಲ್ಲಿ ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ವರ್ಗಗಳ ಮಹಿಳೆಯರಿಗೂ ಲ್ಯಾಪ್‌ಟಾಪ್ ಯೋಜನೆಯನ್ನು ವಿಸ್ತರಿಸುವುದರ ಜೊತೆಗೆ ರಾಯಚೂರು ಜಿಲ್ಲೆಗೆ ಕನಿಷ್ಠ ನಾಲ್ಕು

ಮೂರನೇಯ ಪುಟಕ್ಕೆ



ಬಿಜೆಪಿ ಕುಟುಂಬ ರಾಜಕಾರಣದಿಂದಲೇ 108 ಸ್ಥಾನದಿಂದ 69ಕ್ಕೆ ಕುಸಿದಿದೆ : ಕೆ.ಎಸ್ ಈಶ್ವರಪ್ಪ

ಕಲಬುರಗಿ,ಮಾ.18-

ರಾಜ್ಯದಲ್ಲಿ ಬಿಜೆಪಿಯಲ್ಲಿ ಕುಟುಂಬ ರಾಜಕಾರಣ, ಸಾಮೂಹಿಕ ನಾಯಕತ್ವದ ಕೊರತೆ ಹಾಗೂ ಸಂಘಟನಾ ದುರ್ಬಲತೆಯಿಂದಲೇ ವಿಧಾನಸಭಾ ಸದಸ್ಯರ ಸಂಖ್ಯೆ 108ರಿಂದ 69ಕ್ಕೆ ಇಳಿದಿದೆ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದ್ದಾರೆ.

ನಗರದ ಐವಾನ್ ಎ ಶಾಹಿ ಅತಿಥಿಗೃಹದಲ್ಲಿ ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ''ನಾನು ಕುಟುಂಬ ರಾಜಕಾರಣದ ವಿರುದ್ಧ ಇದ್ದೇನೆ. ಒಂದೇ ಕುಟುಂಬದ ಪ್ರಭಾವದಿಂದ ವಿಧಾನಸಭೆಯಷ್ಟೇ ಅಲ್ಲ, ಲೋಕಸಭೆಯಲ್ಲಿಯೂ ಸದಸ್ಯರ ಸಂಖ್ಯೆ 27ರಿಂದ 15ಕ್ಕೆ ಇಳಿದಿದೆ'' ಎಂದು ಹೇಳಿದರು.

''ನನ್ನ ರಕ್ತದಲ್ಲೇ ಬಿಜೆಪಿ ಇದೆ. ನಾನು ಹುಟ್ಟುತ್ತಲೇ ಆರೆಸ್ಸೆ ಸ್ ಪರಿವಾರದಲ್ಲಿ ಬೆಳೆದವನು. ಆ ಪರಿವಾರವನ್ನು ಬಿಟ್ಟು ಹೊರಬರುವುದು ಸಾಧ್ಯವಿಲ್ಲ. ಪ್ರಾಣ ಇರುವವರೆಗೂ ಬಿಜೆಪಿಯಲ್ಲೇ ಇರುತ್ತೇನೆ. ಯಾವ ಪಕ್ಷಕ್ಕೂ ಹೋಗುವುದಿಲ್ಲ. ಪಕ್ಷ ಶುದ್ಧೀಕರಣಕ್ಕಾಗಿ ಹೊರಗಡೆ ಬಂದಿದ್ದೇನೆ'' ಎಂದು ಹೇಳಿದರು. ''ಅಖಿಲೇಶ್ ಯಾದವ್ ಹಾಗೂ ಕಾಂಗ್ರೆಸ್ ನಾಯಕರು ನನಗೂ ನನ್ನ ಮಗನಿಗೂ ಸ್ಥಾನ ನೀಡುವುದಾಗಿ ಆಹ್ವಾನಿಸಿದ್ದರೂ ನಾನು ಒಪ್ಪಿಕೊಂಡಿಲ್ಲ'' ಎಂದರು.

ರಾಜ್ಯದ ಇತಿಹಾಸದಲ್ಲೇ ವಿಧಾನಸಭೆಯ ಸಭಾಧ್ಯಕ್ಷರು ಸದನದಿಂದ ಹೊರನಡೆದ ಘಟನೆ ಅಪರೂಪದದ್ದು.

ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಆಡಳಿತ ವೈಫಲ್ಯವನ್ನು ತೋರಿಸುತ್ತದೆ ಎಂದು ಅವರು ಆರೋಪಿಸಿದರು.

ಸದನದಲ್ಲಿ ಪ್ರಶ್ನೆಗಳಿಗೆ ಉತ್ತರಿಸಲು ಮಂತ್ರಿಗಳೇ ಇಲ್ಲದಿದ್ದರೆ ಹೌಸ್ ಏಕೆ ಬೇಕು? ಮಂತ್ರಿಗಳ ಗೈರುಹಾಜರಿಯಿಂದ ಬೇಸತ್ತು ಸ್ಪೀಕರ್ ಹೊರನಡೆದಿರುವುದು ರಾಜ್ಯಕ್ಕೆ ಅವಮಾನಕಾರಿ'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರೆಸ್ಸೆ ಸ್ ನಿಷೇಧ ಅಸಾಧ್ಯ :

ಭಾರತದ ಆಂತರಿಕ ವಿಷಯಗಳಲ್ಲಿ ಅಮೆರಿಕಾ ಹಸ್ತಕ್ಷೇಪ ಮಾಡುತ್ತಿರುವುದು ಸರಿಯಲ್ಲ. ಆರೆಸ್ಸೆ ಸ್ ಎಂದಿಗೂ ಧರ್ಮ ಅಥವಾ ವ್ಯಕ್ತಿಗಳ ವಿರುದ್ಧ ಗಲಾಟೆ ಮಾಡಿಲ್ಲ. ಕಳೆದ ನೂರು ವರ್ಷಗಳಿಂದ ದೇಶಾದ್ಯಂತ ಶಾಂತಿಯುತವಾಗಿ ದೇಶಭಕ್ತಿ ಜಾಗೃತಿ ಮೂಡಿಸುತ್ತಿರುವ ಸಂಘಟನೆಯನ್ನು ನಿಷೇಧಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿದರು.

''ರಾಜ್ಯದ ಮುಂಬರುವ ಉಪಚುನಾವಣೆಗಳಲ್ಲಿ ನಾನು ಯಾವುದೇ ನಿರ್ದಿಷ್ಟ ಪಕ್ಷದ ಪರವಾಗಿ ಪ್ರಚಾರ ಮಾಡುವುದಿಲ್ಲ. ಆದರೆ ಹಿಂದುತ್ವವನ್ನು ಬೆಂಬಲಿಸುವ ಪಕ್ಷಕ್ಕೆ ಮತ ನೀಡಿ ಎಂದು ಮತದಾರರಲ್ಲಿ ಮನವಿ ಮಾಡುತ್ತೇನೆ.''-ಕೆ.ಎಸ್. ಈಶ್ವರಪ್ಪ, ಮಾಜಿ ಡಿಸಿಎಂ

ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಬೇಡ - ಡಾ. ಸುರೇಶ ಬಿ. ಇಟ್ನಾಳ



ಕೊಪ್ಪಳ ಮಾ.17-

ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದಡಿ ಅಲ್ಪಸಂಖ್ಯಾತರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಎಲ್ಲಾ ಇಲಾಖೆಗಳು ಹೆಚ್ಚಿನ ಆದ್ಯತೆ ನೀಡಬೇಕು. ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ನಿರ್ಲಕ್ಷ್ಯ ಬೇಡ ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಂಗಳವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ 2025-26ನೇ ಸಾಲಿನ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಗಳ 3ನೇ ತ್ರೈಮಾಸಿಕ (ಅಕ್ಟೋಬರ್-2025 ರಿಂದ ಡಿಸೆಂಬರ್-2025) ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮವು ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಪಾರ್ಸಿ ಹಾಗೂ ಬೌದ್ಧ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ ರೂಪಿಸಲಾದ ಪ್ರಮುಖ ಯೋಜನೆಯಾಗಿದೆ. ಈ ಯೋಜನೆಗಳಡಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಉಚಿತ ಪರೀಕ್ಷಾ ಪೂರ್ವ ತರಬೇತಿ, ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಸೇರಿದಂತೆ ವಿವಿಧ ಯೋಜನೆಗಳ ಲಾಭವನ್ನು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಆಯಾ ಇಲಾಖಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದಡಿ ಕೊಪ್ಪಳ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸಾಧಿಸಿರುವ ಪ್ರಗತಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಕೆಲವು ಇಲಾಖೆಗಳ ಸಾಧನೆ ತೃಪ್ತಿಕರವಾಗಿಲ್ಲವೆಂದು ಸೂಚಿಸಿ, ನಿಗದಿತ ಗುರಿಯಂತೆ ಪ್ರಗತಿ ಸಾಧನೆಗೆ ವಿಳಂಬವಾಗುತ್ತಿರುವ ಯೋಜನೆಗಳನ್ನು ಆದ್ಯತೆ ಮೇರೆಗೆ ತ್ವರಿತವಾಗಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ಕೇವಲ ವರದಿಗಳಲ್ಲೇ ಪ್ರಗತಿ ತೋರಿಸುವುದಕ್ಕಿಂತ ನೆಲ ಮಟ್ಟದಲ್ಲಿ ಸ್ಪಷ್ಟ ಫಲಿತಾಂಶ ಕಾಣುವಂತೆ ಇಲಾಖೆಗಳ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಅಲ್ಪಸಂಖ್ಯಾತರ ಕಲ್ಯಾಣ ಯೋಜನೆಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವಿಶೇಷ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ನಿವೇಶನ, ಮನೆಗಳ ಹಂಚಿಕೆ, ಗಂಗಾ ಕಲ್ಯಾಣ, ಸ್ವಯಂ ಉದ್ಯೋಗ ಯೋಜನೆಗಳು ಸೇರಿದಂತೆ ವಿವಿಧ ಇಲಾಖೆಗಳ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸಲು ಇಲಾಖಾ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅಜ್ಮೀರ್ ಅಲಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಮಾರುತಿ, ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ನಾಮನಿರ್ದೇಶಿತ ಸದಸ್ಯರಾದ ನಜೀರಸಾಬ್ ಮೂಲಿಮನಿ, ಮೆಹಬೂಬ್ ಪಾಷಾ ಮಾನ್ವಿ ಹಾಗೂ ಮತ್ತಿತರರು ಸೇರಿದಂತೆ ವಿವಿಧ ಇಲಾಖೆಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲ್ಲೂಕು ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಬಾಗಲಕೋಟೆ ಉಪಚುನಾವಣೆ : ಮುಖ್ಯಮಂತ್ರಿಯೊಂದಿಗೆ ಎ.ವಸಂತ ಕುಮಾರ ನೇತೃತ್ವದಲ್ಲಿ ಸಭೆ




ರಾಯಚೂರು,ಮಾ.18-

ಬಾಗಲಕೋಟೆ ಉಪಚುನಾವಣೆಯ ದಿನಾಂಕ ಘೋಷಣೆಯಾದ ಹಿನ್ನೆಲೆ ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ಎ. ವಸಂತ ಕುಮಾರ್ ನೇತೃತ್ವದಲ್ಲಿ ಮಂಗಳವಾರ ಹಲವು ಮಹತ್ವದ ಸಭೆಗಳು ನಡೆಯುವುವು.

ಮೊದಲು ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಉಪಚುನಾವಣೆಯ ಸಿದ್ಧತೆ ಹಾಗೂ ರೂಪುರೇಷೆಗಳ ಕುರಿತು ಚರ್ಚೆ ನಡೆಯಿತು. ಈ ವೇಳೆ ಚುನಾವಣೆಗೆ ಸಂಬಂಧಿಸಿದ ಸಿದ್ಧತೆಗಳ ಬಗ್ಗೆ ಎ. ವಸಂತ ಕುಮಾರ್ ಮಾಹಿತಿ ನೀಡಿದರು. ಸಭೆಯಲ್ಲಿ ಬಾಗಲಕೋಟೆಯ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಸಚಿವರಾದ ಸತೀಶ್ ಜಾರಕಿಹೊಳಿ, ಶಿವಾನಂದ ಪಾಟೀಲ್, ಶಿವರಾಜ್ ತಂಗಡಗಿ, ಬೈರತಿ ಸುರೇಶ್, ರಹೀಂ ಖಾನ್, ಶಾಸಕ ನಾಗನಗೌಡ ಸೇರಿದಂತೆ ಹಲವು ನಾಯಕರು ಭಾಗವಹಿಸಿದರು. ಇದಲ್ಲದೆ ಮಾಜಿ ಸಚಿವ ರಾಜಶೇಖರ ಪಾಟೀಲ್, ವಿಧಾನಪರಿಷತ್ ಸದಸ್ಯರು ಎಫ್.ಹೆಚ್. ಜಕ್ಕಪ್ಪ ಹಾಗೂ ಬಸವನಗೌಡ ಬಾದರ್ಲಿ ಸಹ ಸಭೆಯಲ್ಲಿ ಹಾಜರಿದ್ದರು.

ನಾಗಮೋಹನ್ ದಾಸ್ ವರದಿ ವಿರೋಧಿಸಿ ಮಾ.25ರಂದು ಬೃಹತ್ ಹೋರಾಟ : ಜೇವರ್ಗಿಯಿಂದ ಸಾವಿರಕ್ಕೂ ಜನ ಭಾಗಿ



ಜೇವರ್ಗಿ, ಮಾ.18-

ನಾಗಮೋಹನ್ ದಾಸ್ ವರದಿಯಲ್ಲಿ ಬಲಗೈ ಸಮುದಾಯದ ಹಿತಾಸಕ್ತಿಗಳನ್ನು ಕಡೆಗಣಿಸಿ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿ,

ವರದಿಯನ್ನು ತಿರಸ್ಕರಿಸುವಂತೆ ಆಗ್ರಹಿಸಿ ಮಾರ್ಚ್ 25 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೃಹತ್ ಹೋರಾಟಕ್ಕೆ ಜೇವರ್ಗಿ ತಾಲೂಕಿನಿಂದ ಸುಮಾರು 1000ಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಾಂತಪ್ಪ ಕೂಡಲಗಿ ತಿಳಿಸಿದ್ದಾರೆ.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಬಲಗೈ ಹೋರಾಟ ಸಮಿತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಮುದಾಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಒಗ್ಗಟ್ಟಿನಿಂದ ಹೋರಾಡುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮರಿಯಪ್ಪ ಬಡಿಗೇರ್ ಮಾತನಾಡಿ, ಹಕ್ಕುಗಳ ರಕ್ಷಣೆಗೆ ನಡೆಯುತ್ತಿರುವ ಈ ಹೋರಾಟಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಸಮಾಜದ ಹಿರಿಯ ಮುಖಂಡರಾದ ಸುಭಾಷ್ ಚನ್ನೂರ ಹಾಗೂ ಪುಂಡಲೀಕ ಗಾಯಕ್ವಾಡ್ ಸಭೆಯನ್ನುದ್ದೇಶಿಸಿ ಮಾತನಾಡಿ, ಹಕ್ಕೊತ್ತಾಯಗಳ ಹೋರಾಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಭೀಮರಾಯ ನಗನೂರ, ಮಲ್ಲಣ್ಣ ಕೊಡಚಿ, ಬಸಣ್ಣ ಸರ್ಕಾರ್, ಹಯ್ಯಾಳಪ್ಪ ಗಂಗಾಕರ್, ವಕೀಲರಾದ ರಾಜಶೇಖರ್ ಶಿಲ್ಪಿ, ಮಲ್ಲಿಕಾರ್ಜುನ್ ಕಟ್ಟಿಮನಿ ಕೆಲ್ಲೂರು, ಸಿದ್ಧರಾಮಕಟ್ಟಿ, ಮಹಾದೇವ ಕೋಳಕೂರ, ಶ್ರೀಹರಿ ಕರ್ಕಳ್ಳಿ, ರವಿ ಕುಳಗೇರಿ, ದೌಲಪ್ಪ ಮದನ್, ಸಿದ್ದು ಕೆರೂರ್, ಮಾಪಣ್ಣ ಕಟ್ಟಿ, ಗುಂಡಪ್ಪ ಜಡಗಿ, ವಿಶ್ವಾರಾಧ್ಯ ಗೋಪಾಲ್ಕರ್ ,

ರಾಯಪ್ಪ ಬಾರಗಿಡ, ಶ್ರೀಮಂತ ಧನ್ನಕರ, ಹರಿಚಂದ್ರ ಕೊಡಚಿ, ನಿಜಲಿಂಗ ದೊಡ್ಡಮನಿ, ಶಾಂತು ಜಮಖಂಡಿ, ಸಂಗಮೇಶ ಕೊಂಬಿನ, ಶಿವಕುಮಾರ್ ಗೋಲ, ಬಾಗರೆಡ್ಡಿ ಆಂದೋಲ, ಮಲ್ಲಮ್ಮ ಕೊಬ್ಬಿನ, ಜಗದೇವಿ ಜಟ್ಟನಾಕರ್, ವಿಜಯ್ ಕುಮಾರ್ ಧರೆನ್, ಪ್ರಭಾಕರ್ ಸಾಗರ್, ಮರೆಪ್ಪ ಬೇಗಾರ್, ಶರಣು ಬಡಿಗೇರ್, ರಾಜು ಹಾಲಗಡ್ಲ, ಶಿವ ಶರಣಪ್ಪ ಮಾರಡಗಿ, ಸೂರ್ಯಕಾಂತ್ ದುಗನರ್, ರೇವಣಸಿದ್ದ ಬಿರಾಳ್, ಯಶವಂತ ಬಡಿಗೇರ್, ಶ್ರೀಮಂತ ಕಿಲ್ಲೇದಾರ್ ಮಂಡೇವಾಲ್, ಹಣಮಂತ ಟೇಲರ್ ಮಿಲಿಂದ ಸಾಗರ್ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಡಿಡಿಯು-ಜಿಕೆವೈ ಯೋಜನೆಯಡಿ ಉದ್ಯೋಗ ಮೇಳ

ಶಿಕ್ಷಣದ ಜತೆ ತಾಂತ್ರಿಕ ಕೌಶಲ್ಯಕ್ಕೆ ಹೆಚ್ಚು ಆದ್ಯತೆ ನೀಡಿ- ಡಿಸಿ



ಕೊಪ್ಪಳ,ಮಾ.17 -

ಉದ್ಯೋಗಾಕಾಂಕ್ಷಿಗಳು ತಮ್ಮ ಶಿಕ್ಷಣದ ಜತೆಗೆ ತಾಂತ್ರಿಕ ಕೌಶಲ್ಯಗಳಿಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಅವರು ಕೊಪ್ಪಳ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕೌಶಲ್ಯ ಮಿಷನ್, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಡಿಡಿಯು-ಜಿಕೆವೈ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದರು.

ಯಾರು ಹೆಚ್ಚು ಓದಿಕೊಂಡಿರುತ್ತಾರೆ ಅವರು ಮಾತ್ರ ಬುದ್ದಿವಂತರು ಎಂದು ಒಂದು ಕಾಲದಲ್ಲಿ ಹೇಳಲಾಗುತ್ತಿತ್ತು. ಆದರೆ, ಈಗ ಅದು ಬದಲಾಗಿದೆ. ಇಂದಿನ ತಾಂತ್ರಿಕ ಯುಗದಲ್ಲಿ ವಿದ್ಯಾಭ್ಯಾಸ, ಜ್ಞಾನದ ಜೊತೆಗೆ ಕೌಶಲ್ಯ ಮತ್ತು ಮನೋಭಾವ ಬಹಳ ಮುಖ್ಯವಾಗಿದೆ. ಇವೆಲ್ಲ ಅರ್ಹತೆ ಹೊಂದಿರುವವರು ಕಾರ್ಖಾನೆಗಳಲ್ಲಿ, ಖಾಸಗಿ ಅಥವಾ ಸರ್ಕಾರಿ ವಲಯಗಳಲ್ಲಿ ಸುಲಭವಾಗಿ ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇಂದಿನ ತಂತ್ರಜ್ಞಾನ ಯೋಗದಲ್ಲಿ ವಿದ್ಯಾಭ್ಯಾಸದ ಜೊತೆಗೆ ಕೌಶಲ್ಯ ತರಬೇತಿಗಳು ಅತ್ಯವಶ್ಯಕವಾಗಿರುವುದರಿಂದ ಸರ್ಕಾರಗಳು ಹಲವಾರು ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿವೆ. ಕೌಶಲಾಭಿವೃದ್ಧಿ ತರಬೇತಿಯ ಸದ್ಬಳಕೆಯನ್ನು ಮಾಡಿಕೊಳ್ಳಲು ವಿದ್ಯಾರ್ಥಿಗಳು, ಯುವ ಜನತೆ ಮುಂದೆ ಬರಬೇಕೆಂದರು.

ಭಾರತದ ಪದವಿ ಪೂರ್ಣಗೊಳಿಸಿದವರಲ್ಲಿ ಶೇ. 50ರಷ್ಟು ಜನರಿಗೆ ಮಾತ್ರ ಉದ್ಯೋಗ ಸಿಗುತ್ತಿದೆ. ಬಹಳಷ್ಟು ಜನ ನಿರುದ್ಯೋಗಿಗಳಾಗಿ ಉಳಿಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನ್ಯಾಷ್ನಲ್ ಸ್ಕಿಲ್ ಕ್ವಾಲಿಫಿಕೇಶನ್ ಫ್ರೇಮ್‌ವರ್ಕ್ (ಎನ್.ಎಸ್.ಕ್ಯೂ.ಎಫ್) ಮೂಲಕ ನ್ಯಾಷ್ನಲ್ ಸ್ಕಿಲ್ ಡೆವಲೆಪ್ಮೆಂಟ್ ಕೌನ್ಸಿಲ್ ರವರು ಸುಮಾರು 8 ಹಂತಗಳಲ್ಲಿ ವೃತ್ತಿಪರ ತರಬೇತಿಯನ್ನು ನೀಡುತ್ತಾರೆ. ಇದರಿಂದ ಶಾಲಾ ಶಿಕ್ಷಣದೊಂದಿಗೆ ತಾಂತ್ರಿಕ ಕೌಶಲ್ಯಗಳನ್ನು ಜೋಡಿಸಿ, ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಮತ್ತು ಕಲಿಕೆಯಲ್ಲಿ ನಮ್ಯತೆಯನ್ನು ಒದಗಿಸಲು ಸಹಾಯವಾಗುತ್ತದೆ. ಪದವಿ ಪೂರ್ಣಗೊಳಿಸಿದ ಅಭ್ಯರ್ಥಿಗಳು ಇದರಲ್ಲಿ ನೋಂದಾಯಿಸಿಕೊಂಡು ತರಬೇತಿ ಪಡೆದು ಪ್ರಮಾಣ ಪತ್ರ ಪಡೆದುಕೊಂಡಲ್ಲಿ ನಿಮಗೆ ಸುಲಭವಾಗಿ ಉದ್ಯೋಗವನ್ನು ಪಡೆದುಕೊಳ್ಳಲು ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಯ ತಳಕಲ್‌ನಲ್ಲಿ ವಿಟಿಯು ಬಹು ಕೌಶಲ್ಯ ಕೇಂದ್ರವಿದ್ದು, ವಿವಿಧ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಭಿವೃದ್ಧಿ ಅಧಿಕಾರಿ ಕೆ.ಗವಿಶಂಕರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಇಂದು ಉದ್ಯೋಗ ಮೇಳದಲ್ಲಿ ಸುಮಾರು 61ಕ್ಕೂ ಅಧಿಕ ಕಂಪನಿಗಳು ಪಾಲ್ಗೊಂಡಿವೆ. ಉದ್ಯೋಗಕ್ಕಾಗಿ ಎರಡು ಸಾವಿರ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದು, ಸುಮಾರು 300ಕ್ಕೂ ಹೆಚ್ಚು ಉದ್ಯೋಗಾಕಾಂಗಶಿಗಳು ಭಾಗವಹಿಸಿದ್ದಾರೆ. ಯಾವುದೇ ವಿದ್ಯಾರ್ಹತೆ ಇರಲ್ಲಿ ಎಲ್ಲರೂ ತಮ್ಮ ಕೌಶಲ್ಯಾಧಾರಿತ ಸಂದರ್ಶನ ನೀಡಿ ಉದ್ಯೋಗ ಪಡೆದುಕೊಳ್ಳಬೇಕು. ಉದ್ಯೋಗಾಕಾಂಕ್ಷೆ ಹೊಂದಿರು ಯುವಕರು ಇಂತಹ ಮೇಳಗಳಲ್ಲಿ ಭಾಗವಹಿಸಿ, ಉದ್ಯೋಗದ ನೆರವು ಪಡೆದುಕೊಳ್ಳಬೇಕು. ಉದ್ಯೋಗಾಕಾಂಕ್ಷಿಗಳು, ಈ ಮೇಳದಲ್ಲಿ ಬಂದಿರುವ ಎಲ್ಲಾ ಕಂಪನಿಗಳಿಗೆ ಸಂದರ್ಶನ ನೀಡಿ, ನಿಮಗೆ ಸಮಂಜಸ ಎನಿಸುವ ಕಂಪನಿಯನ್ನು ಆಯ್ಕೆ ಮಾಡಿಕೊಂಡು, ಸಂದರ್ಶನ ನೀಡಬೇಕು. ಉದ್ಯೋಗಾಕಾಂಕ್ಷಿಗಳು ಸರ್ಕಾರ, ಜಿಲ್ಲಾಡಳಿತ ಮತ್ತು ವಿವಿಧ ಇಲಾಖೆಗಳ ಮೂಲಕ ಹಮ್ಮಿಕೊಳ್ಳುವ ಇಂತಹ ಮೇಳಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೊಪ್ಪಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ವಾಯ್.ಬಿ.ಅಂಗಡಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಕೊಪ್ಪಳ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಕಮಲರಾಜ್, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಉದ್ಯೋಗಾಧಿಕಾರಿ ಮಂಜುಳಾ ಉಪ್ಪಾರ, ಕೌಶಲ್ಯ ಅಭಿವೃದ್ಧಿ ಅಧಿಕಾರಿ ಮಂಜುನಾಥ, ಸಿಬ್ಬಂದಿ ಮೌನೇಶ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿವಿಧ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಜಿಟಿಟಿಸಿ ಮುಖ್ಯಸ್ಥರು, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರು, ಆರ್-ಸೇಟಿಯ ನಿರ್ದೇಶಕರು, ಜಿಲ್ಲಾ ಹಾಗೂ ತಾಲೂಕ ಸಂಜೀವಿನಿ ಯೋಜನೆಯ ಸಿಬ್ಬಂದಿ, ನಲ್ಮ ಸಿಬ್ಬಂದಿ, ಸ್ಕೌಟ್ ಗೈಡ್ ಹಾಗೂ ವಿವಿಧ ಕಂಪನಿಗಳ ಪ್ರತಿನಿಧಿಗಳು ಮತ್ತು ಉದ್ಯೋಗಾಕಾಂಕ್ಷಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಅರ್ಹ ಅಭ್ಯರ್ಥಿಗಳಿಗೆ ಜಾಬ್ ಆಫರ್ ಲೆಟರ್‌ಗಳನ್ನು ವಿತರಣೆ ಮಾಡಲಾಯಿತು. ಜಿ.ಪಂ ಎನ್.ಆರ್.ಎಲ್.ಎಂ. ಶಾಖೆಯ ಅಂಬಣ್ಣ ಅವರು ಕಾರ್ಯಕ್ರಮ ನಿರೂಪಿಸಿದರು.



ಕೇಂದ್ರ ಕಾರಾಗೃಹದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಕಲಬುರಗಿ. ಮಾ.18-

ಕಲಬುರಗಿ ಕೇಂದ್ರ ಕಾರಾಗೃಹ ಹಾಗೂ ಕಡಗಂಚಿ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಇವುಗಳ ಸಂಯುಕ್ತಾಶ್ರಯದಲ್ಲಿ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಆಗಮಿಸಿ ಫಾದರ್ ಮ್ಯಾಕ್ಸಿಮ್ ಅವರು ಮಾತನಾಡಿ, ಕಾರಾಗೃಹದ ಬಂದಿಗಳಿಗೆ ಈ ಸಂಸ್ಥೆಯಲ್ಲಿ ಮನಃ ಪರಿವರ್ತನೆಗಾಗಿ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ತಾವೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾನಸಿಕವಾಗಿ, ದೈಹಿಕವಾಗಿ ಸದೃಢರಾಗಿ ಇಲ್ಲಿಂದ ಬಿಡುಗಡೆ ಹೊಂದಿ ತಮ್ಮ ಕುಟುಂಬದೊಂದಿಗೆ ಒಳ್ಳೆಯ ಜೀವನ ನಡೆಸಿ ಎಂದು ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಕಲಬುರಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಕೆ. ಸುರೇಶ ಅವರು ಮಾತನಾಡಿ, ಮಹಿಳಾ ಬಂದಿಗಳಿಗೆ ಕರಕುಶಲ, ಕೌಶಲ್ಯಾಧಾರಿತ ತರಬೇತಿ ಸೇರಿದಂತೆ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ಮನಃ ಪರಿವರ್ತನೆ ಹೊಂದಲು ಪ್ರಯತ್ನಿಸಲಾಗುತ್ತಿದೆ. ತಾವು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಬಂದಿಗಳಿಗೆ ವಿವಿಧ ಆಟೋಟಗಳನ್ನು ಹಮ್ಮಿಕೊಂಡು ಬಂದಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಕಡಗಂಚಿ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟರವರು ಮಹಿಳಾ ಬಂದಿ ವಿಭಾಗಕ್ಕೆ ವಾಟರ್ ಕೂಲರ್ ದೇಣಿಗೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧೀಕ್ಷಕರಾದ ರಾಕೇಶ ಕಾಂಬ್ಳೆ, ಸಹಾಯಕ ಅಧೀಕ್ಷಕರಾದ ಸುರೇಶ ಬಿ, ಚನ್ನಪ್ಪ ಯಟಗಾಲ್, ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ ಕಾರ್ಯದರ್ಶಿ ಫಾದರ್ ವಿಲಿಯಂ ಮಿರಂಡಾ, ಬ್ರದರ್ ಫ್ಲೇಮಿಂಗ್, ಜೀಜಾ, ಅನಿತಾ, ಜೈಲರ್‌ಗಳಾದ ಸಾಗರ್ ಪಾಟೀಲ್, ಶ್ರೀಮಂತಗೌಡ ಪಾಟೀಲ್ ಉಪಸ್ಥಿತರಿದ್ದರು.

ಈ ಸಂಸ್ಥೆಯ ಶಿಕ್ಷಕರಾದ ನಾಗರಾಜ ಮೂಲಗೆ ಅವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಸಿಸ್ಟರ್ ಡೈನಾ ಮತ್ತು ಸಿಸ್ಟರ್ ವಸಂತಾ ವಂದಿಸಿದರು. ಈ ಸಂದರ್ಭದಲ್ಲಿ ಕಾರಾಗೃಹದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಶಿವನಗೌಡ ನಾಯಕ ವಿರುದ್ಧ ಪ್ರಕರಣ ದಾಖಲಿಸಿದರೆ ಹೋರಾಟ ತೀವ್ರ - ನರಸಿಂಹಲು

ನೀಡಿದೆ. ಇದರ ನಂತರ ದೇಶದ ವಿವಿಧ ರಾಜ್ಯಗಳಲ್ಲಿ ಒಳಮೀಸಲಾತಿ ಜಾರಿಗೆ ಮಾಡಿದೆ. ಆದರೆ ರಾಜ್ಯ ಕಾಂಗ್ರೆಸ್ ಒಳಮೀಸಲಾತಿ ಜಾರಿ ಮಾಡದೆ ಮೀನಾಮೇಷ ಎನಿಸುತ್ತಿದೆ. ಸಾಮಾಜಿಕ ನ್ಯಾಯ ಪರ ಎನ್ನುವ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರಕಾರ ಆತ್ಮ ಅವಲೋಕನ ಮಾಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಎಲ್ ಬಿ ಸುರೇಶ,ಶಿವಾನಂದ,ರಮೇಶ,ನರಸಪ್ಪ ನಾಯಕ,ಸುರೇಶ ಭಂಡಾರಿ, ಮಂಜುನಾಥ ಸೇರಿದಂತೆ ಉಪಸ್ಥಿತರಿದ್ದರು.

ಹಿಂದುಳಿದ ವರ್ಗ ಮಹಿಳೆಯರಿಗೂ ಲ್ಯಾಪ್‌ಟಾಪ್ ಯೋಜನೆ ವಿಸ್ತರಣೆ ಮಾಡಲಿ-ಪಿ. ಸುರೇಖಾ ಆಗ್ರಹ

ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಬೇಕು ಎಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಗಾಯತ್ರಿ, ಈರಮ್ಮ, ನಂದಿನಿ ವೀರೇಶ್, ಬಿ. ಉಮಾ, ಇಂದಿರಾ ರಾಘಮ್ಮ, ಕವಿತಾ ವೀರೇಶ್, ಉಮಾಶ್ರೀ, ಅಂಜಲಿ ಸೇರಿದಂತೆ ಹಲವು ಸದಸ್ಯರು ಉಪಸ್ಥಿತರಿದ್ದರು

ಅಂಬೇಡ್ಕರ್ ವೃತ್ತದಲ್ಲಿ ಶಿವನಗೌಡ ನಾಯಕ ಚಿತ್ರ ದಹಿಸಿ ಪ್ರತಿಭಟನೆ , ಡಿಎಸ್‌ಪಿ ಮೂಲಕ ಮನವಿ ಸಲ್ಲಿಕೆ

ಖಂಡನೀಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಕ್ಷಣವೇ ಕೆ. ಶಿವನಗೌಡ ನಾಯಕ ಅವರು ಕ್ಷಮೆಯಾಚಿಸಬೇಕು ಹಾಗೂ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ಹಂತದಲ್ಲಿ ಅವರ ನಿವಾಸದ ಮುಂದೆ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಗೌರವಾಧ್ಯಕ್ಷ ಸತ್ಯನಾರಾಯಣ, ಜಿಲ್ಲಾಧ್ಯಕ್ಷ ಭೀಮಣ್ಣ ಮಂಚಾಳ, ಮಲ್ಲೇಶ್ ಕೊಲಿಮಿ, ರಾಮಕೃಷ್ಣ, ಅಂಜಿನಯ್ಯ ಕೆ.ಈ. ಕುಮಾರ್ ಈರಣ್ಣ. ಬಸವರಾಜ್ ಅರ್ಚನಾ ಸುಂಕರಿ ಸೇರಿದಂತೆ ಹಲವು ಮುಖಂ ಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಆತಂಕ, ಭಯವಿಲ್ಲದೆ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ: ತಿಪ್ಪರಾಜು ಹವಾಲ್ದಾರ್

ಹರಿಸಬೇಕು. ಬರಹ ಸ್ಪಷ್ಟವಾಗಿರಲಿ ಮತ್ತು ಉತ್ತರಗಳು ಅರ್ಥಪೂರ್ಣ ವಾಗಿರಲಿ ಎಂದು ಸೂಚಿಸಿದರು.

ಶಿಕ್ಷಣವು ಪ್ರತಿಯೊಬ್ಬರ ಜೀವನ ದಲ್ಲಿ ಪ್ರಮುಖವಾದ ಪಾತ್ರ ವಹಿಸು ತ್ತದೆ. ಎಸ್.ಎಸ್.ಎಲ್.ಸಿ ಪರೀಕ್ಷೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಹಂತವಾಗಿದ್ದು, ಇದರಲ್ಲಿ ಉತ್ತಮ ಸಾಧನೆ ಮಾಡಲು ಶ್ರದ್ಧೆ ಮತ್ತು ಶಿಸ್ತು ಅಗತ್ಯ ಎಂದು ಹೇಳಿದರು. ಪೋಷಕರು ಮತ್ತು ಶಿಕ್ಷಕರು ನೀಡಿರುವ ಮಾರ್ಗದರ್ಶ ನವನ್ನು ಪಾಲಿಸಿ, ತಮ್ಮ ಗುರಿಯನ್ನು ಸಾಧಿಸಬೇಕು ಎಂದು ವಿದ್ಯಾರ್ಥಿ ಗಳಿಗೆ ಪ್ರೇರಣೆ ನೀಡಿದರು.

ಶಾಲೆಯ ಶಿಕ್ಷಕರಿಗೂ ಅಭಿನಂ ದನೆ ಸಲ್ಲಿಸಿದ ಅವರು, ವಿದ್ಯಾರ್ಥಿ ಗಳನ್ನು ಉತ್ತಮವಾಗಿ ತಯಾರಿಸಿ ಪರೀಕ್ಷೆಗೆ ಸಜ್ಜುಗೊಳಿಸಿರುವುದಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿಯೂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ದೇವಸೂ ಗೂರು ಮಂಡಲ ಅಧ್ಯಕ್ಷರಾದ ಶರಣಪ್ಪ, ಮಾಜಿ ಮಂಡಲ ಅಧ್ಯಕ್ಷ ರಾದ ಶಂಕರಗೌಡ ಮಿರ್ಜಾಪುರ, ಮಾಜಿ ಜಿ.ಪಂ ಸದಸ್ಯರಾದ ಕೇಶವರೆಡ್ಡಿ , ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷರಾದ ಅಚ್ಯುತ್ ರೆಡ್ಡಿ , ಮಾಜಿ ಗ್ರಾ.ಪಂ ಅಧ್ಯಕ್ಷರಾದ ಮಹೇಶ್ , ಮಹೇಶ್ ,ನಾರಾಯಣ ಕುಲಕರ್ಣಿ ಪೂರತಿಪ್ಲಿ, ಸುರೇಶ್ ಪಲ್ಕಂದೊಡ್ಡಿ , ಮಹಾದೇವ , ನರಸಿಂಹ , ದಸ್ತಗಿರಿ ,ಮಲ್ಲೇಶ್ ಚಂದ್ರಬಂಡಾ ಸೇರಿದಂತೆ ಶಿಕ್ಷಕರು ಪಾಲಕರು ಉಪಸ್ಥಿತರಿದ್ದರು .

ಭಗವಾನ್ ಮಹಾವೀರ ಜಯಂತಿ ಆಚರಣೆ; ಪೂರ್ವಭಾವಿ ಸಿದ್ಧತಾ ಸಭೆ

ಸೂಚಿಸಿದರು.

ಇದಕ್ಕೂ ಮುಂಚೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಅವರು ಸಭೆಗೆ ಆಗಮಿಸಿದ ಸರ್ವರನ್ನೂ ಸ್ವಾಗತಿಸಿದರು.ಇದೇ ಸಂದರ್ಭದಲ್ಲಿ ಮಹಾವೀರ ಹಾರದ್ರ್ಾ, ಅಶೋಕ ಲೋದಾ, ಎಸ್.ಎಸ್.ಜೈನ್ ಸಾವ್, ಗೌತಮಿ ಗಿಯ್, ರಾಜೇಂದ್ರ ಕುಮ್ರ್ಾ, ಅಶೋಕ ಕುಮಾರ್ ಸಿ.ಕೆ ಜೈನ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಜಿಲ್ಲಾಡಳಿತದಿಂದ ಮಾರ್ಚ್ 23ರಂದು ದೇವರ ದಾಸಿಮಯ್ಯ ಜಯಂತಿ

ದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ.

ಮಾನ್ವಿ ಸಾಹಿತಿ ರಮೇಶ ಬಾಬು ಅವರು ದೇವರ ದಾಸಿಮಯ್ಯ ಜಯಂತಿಯಲ್ಲಿ ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಎನ್‌ಎಸ್‌ಎಸ್ ಶಿಬಿರದ ಸಮಾರೋಪ ಸಮಾರಂಭ

ರಾಯಚೂರು,ಮಾ.18-

ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಶಿಬಿರದ ಸಮಾರೋಪ ಸಮಾರಂಭವು ರಾಯಚೂರು ತಾಲೂಕಿನ ದಿನ್ನಿ ಗ್ರಾಮದಲ್ಲಿ ನೆರವೇರಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ (ಶ್ರೀ ರಾಜೇಂದ್ರ ಕುಮಾರ), ಗ್ರೀನ್ ರಾಯಚೂರು ಪರಿಸರ ಹೋರಾಟಗಾರರು ಹಾಗೂ ಜಿಲ್ಲಾ ಸಹ ಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿರುವವರು ಆಗಮಿಸಿ ಪರಿಸರ ಸಂರಕ್ಷಣೆ ಕುರಿತು ಶಿಬಿರಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದ ಅಂತಿಮ ಭಾಷಣವನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ವೀರೇಶ್ ರಾಜಗುರು ಅವರು ನೀಡಿ, ಕಳೆದ 7 ದಿನಗಳಲ್ಲಿ ಶಿಬಿರದ ಮೂಲಕ ನಡೆಸಿದ ವಿವಿಧ ಚಟುವಟಿಕೆಗಳ ಕುರಿತು ವಿವರಿಸಿದರು. ಈ ಅವಧಿಯಲ್ಲಿ ಕೈಗೊಂಡ ಸ್ವಚ್ಛತಾ ಆಂದೋಲನವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಶಿಬಿರಾರ್ಥಿಗಳಿಗೆ ಪ್ರೇರಣೆ ನೀಡಿದರು. ಜೊತೆಗೆ ಎನ್‌ಎಸ್‌ಎಸ್ ಶಿಬಿರವನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಎಲ್ಲಾ ಸಿಬ್ಬಂದಿ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ತಂಡವು ಎಲ್ಲಾ ಸಿಬ್ಬಂದಿ ಸದಸ್ಯರನ್ನು ಗೌರವಪೂರ್ವಕವಾಗಿ ಸನ್ಮಾನಿಸಿತು.

ಇದಲ್ಲದೆ ಕಾಲೇಜಿನ ಉಪನ್ಯಾಸಕರಾದ ಶ್ರೀ ಚಿದಾನಂದಪ್ಪ, ಶ್ರೀ ಮಹೇಶ್ ಬಿ, ಶ್ರೀ ಅಮರೇಶ್ ಹಿರೇಮಠ, ಶ್ರೀ ನರಸಿಂಹ, ಶ್ರೀ ಸಾಗರ್, ಶ್ರೀ ಹನುಮಂತ್ ಜಿ, ಶ್ರೀ ಸತೀಶ ನಾಯಕ್, ಶ್ರೀ ಶರಣಪ್ಪ, ಶ್ರೀ ರಂಗನಾಥ್, ಶ್ರೀ ರಂಗಸ್ವಾಮಿ, ಹಾಗೂ ಕುಮಾರಿ ಅನಿತಾ ಸೇರಿದಂತೆ ಎಲ್ಲಾ ಸಿಬ್ಬಂದಿ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಧನ್ಯವಾದಗಳನ್ನು ಶ್ರೀ ಹನುಮಂತ್ ಜಿ ಅವರು ಸಲ್ಲಿಸಿದರು.

ಶಿಬಿರಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯಿಂದ ಸಮಾರೋಪ ಸಮಾರಂಭ ಯಶಸ್ವಿಯಾಗಿ ನೆರವೇರಿತು.

ಮಾರ್ಚ್ ಮಾಹೆಯ ಪಡಿತರ ಧಾನ್ಯ ವಿತರಣೆ: ಜಿಲ್ಲಾಧಿಕಾರಿ ನಿತೀಶ್ ಕೆ.

ರಾಯಚೂರು ಮಾ.17

ಇಲ್ಲಿಯ ಜಿಲ್ಲಾ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 2026ರ ಮಾರ್ಚ್ ಮಾಹೆಯ ಪಡಿತರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಮಾರ್ಚ್ 2026 ರ ಮಾಹೆಗೆ ರಾಷ್ಟಿಯ ಆಹಾರ ಭದ್ರತಾ ಕಾಯ್ದೆಯಡಿ ರಾಯಚೂರು ಜಿಲ್ಲೆಯ ಕೇಂದ್ರ ವ್ಯಾಪ್ತಿಯ ಪ್ರತಿ ಅಂತ್ಯೋದಯ(ಎಎವೈ) ಪಡಿತರ ಚೀಟಿಗೆ 35 ಕೆ.ಜಿ ಸಾರವರ್ಧಿತ ಅಕ್ಕಿ ಹಾಗೂ ಕೇಂದ್ರ ವ್ಯಾಪ್ತಿಯ ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 05 ಕೆ.ಜಿ ಸಾರವರ್ಧಿತ ಅಕ್ಕಿ ಇದರ ಜೊತೆಗೆ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಏಕ ಸದಸ್ಯ, ದ್ವಿ-ಸದಸ್ಯ ಮತ್ತು ತ್ರಿ-ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಂತ ಹೆಚ್ಚಿನ ಸದಸ್ಯರುಳ್ಳ ಕೇಂದ್ರ, ರಾಜ್ಯ ವ್ಯಾಪ್ತಿಯ ಅಂತ್ಯೋದಯ (ಎಎವೈ) ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ 05 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು.

ಪುನೀತ್ ರಾಜಕುಮಾರ್ ಹುಟ್ಟುಹಬ್ಬದ ಅಂಗವಾಗಿ ಕುಡಿವ ನೀರಿನ ಅರವಟಿಕೆ ಆರಂಭ



ದೇವದುರ್ಗ,ಮಾ.18-

ದಿನಾಂಕ 17/03/2026 ಮಂಗಳವಾರ ಸಾಯಂಕಾಲ 5:00 ಗಂಟೆಗೆ ದೇವದುರ್ಗ ಪಟ್ಟಣದ ವಾರ್ಡ್ ನಂಬರ್ 4 ರ ಶಾಂತಿನಗರ ಮಾಳೆಗಡ್ಡಿಯಲ್ಲಿ ಡಾಕ್ಟರ್ ಪುನೀತ್ ರಾಜಕುಮಾರ್ ಅವರ 51ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಎಸ್ ಆರ್ ರುದ್ರಾಕ್ಷಿ ಡೆವೆಲಪರ್ಸ್ ಸಂಯುಕ್ತ ಆಶ್ರಯದಲ್ಲಿ ದೇವದುರ್ಗ ರುದ್ರಾಕ್ಷಿ ಕುಟುಂಬದ ವತಿಯಿಂದ ಸತತ 5 ನೇ ವರ್ಷ ಸಾರ್ವಜನಿಕರಿಗೆ ಕುಡಿಯುವ ನೀರಿನ ಅರವಂಟಿಕೆ ಹಾಗೂ ಶಾಲಾ ಮಕ್ಕಳಿಗೆ ಪೆನ್ನು ನೋಟ್ ಬುಕ್ ಸಮವಸ್ತ್ರ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿರತಕ್ಕಂತ ಸನ್ಮಾನ್ಯ ಶ್ರೀ ಜಿ ಬಸವರಾಜ ನಾಯಕರು ಹಿರಿಯ ರೈತ ಸಂಘದ ಹೋರಾಟಗಾರರು ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ದಿವಂಗತ ಡಾಕ್ಟರ್ ಪುನೀತ್ ರಾಜಕುಮಾರ್ ಅವರ 51ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಸತತ ಐದನೇ ವರ್ಷಗಳ ಕಾಲ ದೇವದುರ್ಗ ರುದ್ರಾಕ್ಷಿ ಕುಟುಂಬದವರು ಸಾರ್ವಜನಿಕರಿಗೆ ಕುಡಿಯುವ ನೀರಿನ ಹರವಂಟಿಗೆ ಮತ್ತು ಶಾಲಾ ಮಕ್ಕಳಿಗೆ ಪೆನ್ನು ಪುಸ್ತಕ ಸಮವಸ್ತ್ರ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಮಾಡುವುದು ತುಂಬಾ ಶ್ಲಾಘನೀಯ ಎಂದರು.

ಈ ಕುಟುಂಬವು ಸುಮಾರು ವರ್ಷಗಳ ಕಾಲ ಹಗಲುವೇಷ ಕಲೆಯನ್ನು ನಂಬಿಕೊಂಡು ತಮ್ಮ ಜೀವನವನ್ನು ಮಾಡುವ ಈ ಕುಟುಂಬವು ಇಡೀ ಸಮ ಸಮಾಜಕ್ಕೆ ಮಾದರಿಯಾಗಿ ನಿಂತಿದೆ ಇಂಥ ದಿನಮಾನಗಳಲ್ಲಿ ಈ ಒಂದು ಬಡ ಕುಟುಂಬವು ಸಮಾಜ ಸೇವೆ ಮಾಡುವುದು ಎಲ್ಲರಿಗೂ ಮಾದರಿಯಾಗಿದ್ದಾರೆ ಇದು ಅಲ್ಲದೆ ಈ ಕುಟುಂಬವು ಶ್ರೀಶೈಲ ಪಾದಯಾತ್ರೆ ಭಕ್ತಾದಿಗಳಿಗೆ ಮೊನ್ನೆ ತಾನೇ ಉಪಾರ ಹಣ್ಣು ಹಂಪಲು ಸಮವಸ್ತ್ರ ಕುಡಿಯುವ ನೀರು ಮುಂತಾದ ಸೇವೆಗಳನ್ನು ಮಾಡಿದ್ದಾರೆ ಹಾಗೆಯೇ ಇವರ ತಂದೆ ತಾಯಿಯ ಪುಣ್ಯ ಸ್ಮರಣೆಯಲ್ಲಿ ಹಲವಾರು ಸಮಾಜ ಕಾರ್ಯಗಳನ್ನು ಮಾಡಿ ಹೆಸರು ಮಾಡಿದ್ದಾರೆ ಈ ಯುವ ಪೀಳಿಗೆಗೆ ಸಮಾಜ ಸೇವೆ ಮಾಡುವಲ್ಲಿ ಮಾದರಿಯಾಗಿದೆ ಎಂದು ಹೇಳಿದರು ತಪ್ಪಾಗಲಿಕ್ಕಿಲ್ಲ ಇವರು ಡಾಕ್ಟರ್ ಪುನೀತ್ ರಾಜಕುಮಾರ್ ಅವರ ಆಸೆಯಂತೆ ಸೇವೆ ಮಾಡುತ್ತಿದ್ದಾರೆ ಇವರ ಸೇವೆಗೆ ಭಗವಂತನು ಮೆಚ್ಚಿ ಹಾರೈಸಿ ಆರೋಗ್ಯವಂತರಾಗಿ ಜೀವಿಸಿ ಇನ್ನು ಹೆಚ್ಚಿನ ಸಮಾಜ ಸೇವೆ ಮಾಡಲೆಂದು ಈ ಸಂದರ್ಭದಲ್ಲಿ ಮಾತನಾಡುತ್ತ ಹಾರೈಸಿದರು

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿರ್ತಕಂತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹೆಚ್ಚಿ ಶಿವರಾಜ್ ಸರ್ ಹಾಗೂ ಮಾಜಿ ಪುರಸಭೆ ಅಧ್ಯಕ್ಷರಾಗಿದ್ದ ನಾಗಪ್ಪ ಉಪ್ಪಾರ್ ಉಪ್ಪಾರ ಸಮಾಜದ ತಾಲೂಕ ಅಧ್ಯಕ್ಷರಾದ ಭೀಮಣ್ಣ

ಹಾಗೂ ಎಸ್‌ಆರ್ ರುದ್ರಾಕ್ಷಿ ಡೆವೆಲಪರ್ ಅಧ್ಯಕ್ಷರಾದ ಹಾಗೂ ಮಾಜಿ ಪುರಸಭಾ ಸದಸ್ಯರಾದ ಈರಣ್ಣ ರುದ್ರಾಕ್ಷಿ ಹಗಲುವೇಷದ ಹಿರಿಯ ಕಲಾವಿದರಾದ ಜಂಬಣ್ಣ ರುದ್ರಾಕ್ಷಿ ಸುಡುಗಾಡ ಸಿದ್ಧ ಸಮುದಾಯದ ರಾಜ್ಯ ಜಂಟಿ ಕಾರ್ಯದರ್ಶಿಯಾದ ರಾಮಚಂದ್ರಪ್ಪ ಮಾದನಂ ಸರಕಾರಿ ಪ್ರಾಥಮಿಕ ಶಾಲೆ ಮಾಳೆಗಡ್ಡಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ಶರಣಬಸವ ಸಂಕಲ ಅಲೆಮಾರಿ ಸಮುದಾಯದ ರಾಜ್ಯ ಯುವ ಮುಖಂಡರಾದ ಯಲ್ಲಪ್ಪ ವಿಭೂತಿ

ರವಿ ಶಾಸ್ತ್ರೀ ಮಾದನಂ ರವಿಚಂದ್ರ ರುದ್ರಾಕ್ಷಿ ಚಂದ್ರಲಿಂಗ ರುದ್ರಾಕ್ಷಿ ಹುಸೇನಪ್ಪ ಆಗಸ್ತು ಹುಸೇನಪ್ಪಾ ಹಾಲಟ್ಟಿ ಬಸವರಾಜ್ ಗೊಂದಳಿ ವೈ.ಬೂಬ ಕಾಲೆಯಗಾರ ದೇವರಾಜ್ ಹಾಗು ಮಾಳೆಗಡ್ಡಿಯ ನಿವಾಸಿಗಳು ಹಲವಾರು ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು .

ಶಿವರಾಜ್ ರುದ್ರಾಕ್ಷಿ ರವರು ಕಾರ್ಯಕ್ರಮ ನಿರೂಪಣೆಯನ್ನು ಮಾಡಿದರು

ಉಚಿತ ಆರೋಗ್ಯ ತಪಾಸಣಾ ಶಿಬಿರ: ಮಾರ್ಚ್ 21ರಂದು ಆಯೋಜನೆ

ರಾಯಚೂರು,ಮಾ.18-

ನಗರದ ವಾಸವಿ ನಗರದಲ್ಲಿರುವ ಶ್ರೀ ರಾಮಕೃಷ್ಣ ಗುರುಕುಲ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಾರ್ಚ್ 21ರಂದು ಆಯೋಜಿಸಲಾಗಿದೆ ಎಂದು ಶ್ರೀ ವಾಸವಿ ಕ್ರಿಯೇಟಿವ್ ಟ್ರಸ್ಟ್ (ರಿ.) ತಿಳಿಸಿದೆ.

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಹಮ್ಮಿಕೊಳ್ಳಲಾಗಿರುವ ಈ ಶಿಬಿರದಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ, ಹೃದಯ ಸಂಬಂಧಿ ಸಮಸ್ಯೆಗಳು, ರಕ್ತದೊತ್ತಡ, ಸಕ್ಕರೆ ಕಾಯಿಲೆ, ಮಹಿಳಾ ಆರೋಗ್ಯ ಸೇರಿದಂತೆ ವಿವಿಧ ಕಾಯಿಲೆಗಳಿಗಾಗಿ ತಜ್ಞ ವೈದ್ಯರಿಂದ ತಪಾಸಣೆ ಹಾಗೂ ಸಲಹೆ ನೀಡಲಾಗುತ್ತದೆ.

ಶಿಬಿರವು ಬೆಳಗ್ಗೆ 10:00ರಿಂದ ಮಧ್ಯಾಹ್ನ 3:30ರವರೆಗೆ ನಡೆಯಲಿದ್ದು, ಡಾ. ಕೆ. ರಾಮಕೃಷ್ಣ, ಡಾ. ಎಂ. ವರ್ ಹಾಗೂ ಡಾ. ಪಾವನಿ ಸೇರಿದಂತೆ ವೈದ್ಯರು ಭಾಗವಹಿಸಲಿದ್ದಾರೆ.

ಶಿಬಿರದಲ್ಲಿ ಭಾಗವಹಿಸಲು ಮುಂಚಿತವಾಗಿ ಹೆಸರು ನೋಂದಣಿ ಮಾಡಿಸಿಕೊಳ್ಳಬೇಕು. ನೋಂದಾಯಿತರಿಗೆ ಮಾತ್ರ ಪ್ರವೇಶ ಕಲ್ಪಿಸಲಾಗುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

ಸಾರ್ವಜನಿಕರು ಈ ಉಚಿತ ಆರೋಗ್ಯ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಲಾಗಿದೆ.

ದೇವದುರ್ಗ ಕನ್ನಡ ಸಾಹಿತ್ಯ ಪರಿಷತ್ತಿನಿಂದ ದತ್ತಿ ನಿಧಿ ಮಹಿಳಾ ದಿನಾಚರಣೆ ಕಾರ್ಯಕ್ರಮ



ದೇವದುರ್ಗ ಪಟ್ಟಣದ ಮುಕ್ತಾಯಕ್ಕ ಪದವಿ ಮಹಾವಿದ್ಯಾಲಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರ ದೇವದುರ್ಗ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಯೋಗದಲ್ಲಿ ಹಮ್ಮಿಕೊಂಡ ದತ್ತಿ ನಿಧಿ ಮಹಿಳಾ ದಿನಾಚರಣೆ ಲಿಂಗೈಕ್ಯ ಶ್ರೀ ಚೇಣೇದ ಶರಣಪ್ಪ ಸಾಹುಕಾರ ವೀರಣ್ಣ ಬಳೆ ನ್ಯಾಯವಾದಿಗಳು ಶ್ರೀಮತಿ ಅಮರಮ್ಮ ಸೊಲಬಣ್ಣ ಶೆಟ್ಟ ಹೆಚ್. ಶಾಂತಪ್ಪ ಕಲಾ ಕೇಸರಿ ನಟ ಸಾಮ್ರಾಟ ಉದಯ್ ಕುಮಾರ್ ಗಂಟಸಾಲ ವೆಂಕಟೇಶ್ವರ ದತ್ತಿ ನಿಧಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎ . ರಂಗಣ್ಣ ಪಾಟೀಲ್ ದತ್ತಿನಿಧಿ ಶೇವಣಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ನಿರಂತರ ಚಟುವಟಿಕೆಗಳಿಗೆ ಆಧಾರ ಸ್ತಂಭವಾಗಿದ್ದು ಕನ್ನಡ ಭಾಷೆ ನಮ್ಮ ಆಸ್ಮಿತೆಯಾಗಿದ್ದು ನಾಡು ನುಡಿ ಜಲ ಭಾಷೆ ಏಳಿಗೆಗೆ ನಿರಂತರವಾಗಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಒಳಗೊಂಡಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಗಳು ನಿರಂತರವಾಗಿ ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದು ದತ್ತಿಧಾನಿಗಳ ಆಶಯಗಳ ಈಡೇರಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಾಡಿನದ್ಯಂತ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು ಸಮಾರಂಭದಲ್ಲಿ ಭಾಗವಹಿಸಿ ಪಾಲ್ಗೊಂಡ ದತ್ತಿ ಉಪನ್ಯಾಸಕರಾದ ಲಿಂಗನಗೌಡ ಬಾಗೂರ್ ಮಾತನಾಡಿ ಕನ್ನಡ ಸಾಹಿತ್ಯದಲ್ಲಿ ವೀರಶೈವ ಧರ್ಮ ಕುರಿತು ಮಾತನಾಡಿದ ಅವರು ವೀರಶೈವ ಧರ್ಮಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು ವೀರಶೈವ ಧರ್ಮವನ್ನು ಅದರ ಆಚರಣೆ ಕುರಿತು ಪುರಾಣಗಳಲ್ಲಿ ಪ್ರವಚನಗಳಲ್ಲಿ ಉಲ್ಲೇಖಿಸಲಾಗುತ್ತದೆ ವೀರಶೈವ ಧರ್ಮ ಎಂದರೆ ಶಿವನನ್ನು ಸ್ಮರಣೆ ಮಾಡುವುದು ಧಾರ್ಮಿಕ ಶ್ರದ್ಧೆ ಭಾವನೆ ಆಚರಣೆ ಸತ್ಕಾರ್ಯಗಳು ಧಾರ್ಮಿಕ ಮನೋಭಾವನೆ ಚಿಂತನೆಗಳು ದೇವರು ಭಗವಂತ ಮೋಕ್ಷ ಸನ್ಮಾರ್ಗ ಮುಂತಾದ ಮಾನವನ ಆಧ್ಯಾತ್ಮಿಕ ಬದುಕಿಗೆ ವೀರಶೈಧರ್ಮ ಪರಂಪರೆ ದಾರಿ ದೀಪವಾಗಿದೆ ಜೊತೆಗೆ ವಚನ ಸಾಹಿತ್ಯ ಮಾನವನ ಸಾಮಾಜಿಕ ಸಮಾನತೆಯನ್ನು ಎತ್ತಿ ತೋರಿಸುತ್ತದೆ ಜೊತೆಗೆ ನಾವು ಹೆಚ್ಚು ಹೆಚ್ಚು ಕನ್ನಡವನ್ನು ಬಳಕೆ ಮಾಡುವುದರಿಂದ ನಮ್ಮ ಕನ್ನಡ ಭಾಷೆಯನ್ನು ಬೆಳೆಸಬಹುದು ಉಳಿಸಬಹುದು ಸರ್ಕಾರ ಕನ್ನಡ ಶಾಲೆಗಳನ್ನು ಉಳಿಸಬೇಕು ವಿದ್ಯಾರ್ಥಿಗಳು ಸಾಹಿತ್ಯ ಲೇಖನಗಳಾದ ಕತೆ ಕವನ ಕಾದಂಬರಿ ನಿರಂತರ ಪುಸ್ತಕಗಳ ಓದುವ ಹವ್ಯಾಸ ಬೆಳೆಸಿಕೊಂಡು ಮೊಬೈಲ್ ಹಾವಳಿಯಿಂದ ದೂರವಿರಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು ಹಂಪಿ ವಿಶ್ವವಿದ್ಯಾಲಯದ ಮಾಜಿ ಸಿಂಡಿಕೇಟ್ ಸದಸ್ಯರು ಕೌಟಿಲ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಬಸವರಾಜ ಕೊಪ್ಪರ್ ಶರಣ ಸಾಹಿತ್ಯ ಕುರಿತು ಮಾತನಾಡಿ ಮಡಿವಾಳ ಮಾಚಿದೇವ ಅಂಬಿಗರ ಚೌಡಯ್ಯ ಹಡಪದ ಅಪ್ಪಣ್ಣ ಅಲ್ಲಮ ಪ್ರಭು ಶಿವಯೋಗಿ ಸಿದ್ದರಾಮ ಇವರು ವಚನ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ವಚನ ಸಾಹಿತ್ಯವು ಕಾಯಕ ನಿಷ್ಠೆ ಸಾಹಿತ್ಯವಾಗಿದ್ದು ಪ್ರತಿಯೊಬ್ಬರು ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು ಶ್ರೀ ಮಡಿವಾಳ ಮಾಚಿದೇವರು 12ನೇ ಶತಮಾನದ ನೇರ ದಿಟ್ಟ ವಚನಕಾರರಾಗಿದ್ದು ವಚನ ಸಾಹಿತ್ಯದ ಲಿಪಿಗಳಿಗೆ ಅಪಾಯ ಬಂದಾಗ ವಚನ ಸಾಹಿತ್ಯವನ್ನು ಸಂರಕ್ಷಣೆ ಮಾಡಿದ ಕೀರ್ತಿಯು ಇವರಿಗೆ ಸಲ್ಲುತ್ತದೆ ಆದ್ದರಿಂದ ಇವರನ್ನು ವಚನಗಳ ಸಂರಕ್ಷಕ ಎಂದು ಕರೆಯುತ್ತಾರೆ ಮಡಿವಾಳ ಮಾಚಿದೇವರು ತಮ್ಮ ವಚನ ಶರಣ ಸಾಹಿತ್ಯ ಮುಖಾಂತರ ಸಮಾಜದ ಅನಿಷ್ಟ ಪದ್ಧತಿಗಳಾದ ಜಾತಿಭೇದ ಧರ್ಮ ಭೇದ ಲಿಂಗಭೇದ ತಾರತಮ್ಯಗಳನ್ನು ಹೋಗಲಾಡಿಸಲು ಶ್ರಮಿಸಿದರು ಶ್ರೀ ಮಡಿವಾಳ ಮಾಚಿದೇವರು ವಚನಕಾರ ಕುರಿತು ಹೆಚ್ಚು ಅಧ್ಯಯನ ನಡೆಸಬೇಕು ಪದವಿ ಮತ್ತು ವಿಶ್ವವಿದ್ಯಾಲಯ ಕೇಂದ್ರಗಳಲ್ಲಿ ಇವರ ಕುರಿತು ಅಧ್ಯಯನ ಪೀಠಗಳನ್ನು ಸರಕಾರ ಸ್ಥಾಪಿಸಬೇಕೆಂದರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಕ್ತಾಯಕ್ಕ ಪದವಿಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಚನ್ನಪ್ಪ ಪ ವಾರ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯಕ ಚಟುವಟಿಕೆಗಳು ನಮ್ಮ ಕನ್ನಡ ಭಾಷೆ ಸಾಹಿತ್ಯ ಬೆಳವಣಿಗೆಗೆ ಪೂರಕವಾಗಿದ್ದು ಲಿಂಗೈಕ್ಯರಾದ ಹಿರಿಯರ ಹೆಸರಿನಲ್ಲಿ ದತ್ತಿ ನಿಧಿ ಕಾರ್ಯಕ್ರಮ ಮಾಡುವುದರಿಂದ ಅವರ ಸಾಧನೆಗಳು ವ್ಯಕ್ತಿ ಚಾರಿತ್ರಿ ತಿಳಿದುಕೊಳ್ಳುವುದಕ್ಕೆ ಉತ್ತಮ ಕಾರ್ಯವೆನಿಸಿದೆ ಮಹಿಳೆಯರು ಇಂದಿನ ಆಧುನಿಕ ಪ್ರಪಂಚದಲ್ಲಿ ಸಾಮಾಜಿಕ ಆರ್ಥಿಕ ರಾಜಕೀಯ ಕ್ರೀಡೆ ವಿಜ್ಞಾನ ತಂತ್ರಜ್ಞಾನ ಸಮಾಜಮುಖಿ ಸಂಘ ಸಂಸ್ಥೆಗಳಲ್ಲಿ ಕ್ರೀಡೆಗಳಲ್ಲಿ ಭಾಗವಹಿಸುತ್ತಿರುವ ಮುಖಾಂತರ ಉನ್ನತವಾದ ಸ್ಥಾನಮಾನಗಳು ಪಡೆದುಕೊಂಡಿದ್ದು ಮಹಿಳಾ ದಿನಾಚರಣೆ ಆಚರಿಸುವುದು ತುಂಬಾ ಅರ್ಥಪೂರ್ಣವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ವೇದಿಕೆ ಮೇಲೆ ಓಂ ಶ್ರೀ ಗುರುವಾಣಿ ಶಿಕ್ಷಣ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ರೇಖಾ ರಾಣಿ ಪಾಟೀಲ್ ಉಪಾಧ್ಯಕ್ಷರಾದ ರೇಣುಕಾ ಪಾಟೀಲ ಎಚ್ ಡಿ ಶಿವರಾಜ ಬಸವರಾಜ್ ಬಳೆ ಉಪನ್ಯಾಸಕರು ಉಪಸ್ಥಿತರಿದ್ದು ಇದೇ ಸಂದರ್ಭದಲ್ಲಿ ದತ್ತಿ ಉಪನ್ಯಾಸಕರಾದ ಲಿಂಗನಗೌಡ ಬಾಗುರ ಬಸವರಾಜ್ ಕೊಪ್ಪರ ದೈಹಿಕ ಶಿಕ್ಷಕರಾದ ಮಮತಾ ಆದಿ ಕ್ರೀಡಾಪಟುವಾದ ಕುಮಾರಿ ನಿರ್ಮಲ ಇವರನ್ನು ಕಾರ್ಯಕ್ರಮದ ಸಂಘಟಕರು ಆತ್ಮೀಯವಾಗಿ ಗೌರವಿಸಿ ಸನ್ಮಾನಿಸಿದರು ಉಪನ್ಯಾಸಕರು ಸಂಘಟನಾ ಕಾರ್ಯದರ್ಶಿಯಾದ ಮಹೇಂದ್ರ ಮೇತ್ರಿ ಸ್ವಾಗತಿಸಿದರು ಎಚ್. ಶಿವರಾಜ್ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು ದೇವದುರ್ಗ ಪ್ರಸ್ತಾವಿಕ ಮಾತನಾಡಿದರು ಮಹೇಂದ್ರ ಮ್ಯಾತ್ರಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಘಟನಾ ಕಾರ್ಯದರ್ಶಿ ಸ್ವಾಗತ ಕೋರಿದರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಚ್. ಶಿವರಾಜ್ ಪ್ರಸ್ತಾವಿಕ ಮಾತನಾಡಿದರು ಕಾರ್ಯಕ್ರಮವನ್ನು ಪರಿಷತ್ತಿನ ಸಹ ಕಾರ್ಯದರ್ಶಿ ಮಲ್ಲೇಶ್ವರಯ್ಯ ನುಲಿ ಕಾರ್ಯಕ್ರಮವನ್ನು ನಿರೂಪಿಸಿದರು ಕೊನೆಯಲ್ಲಿ ಆಕಾಶ ವಂದಿಸಿದರು

ಓದುವ ಅಭ್ಯಾಸ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ

ರಾಯಚೂರು ಮಾ.17

ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳ ಬಳಕೆ ಕಡಿಮೆ ಮಾಡಿ, ಉತ್ತಮವಾಗಿ ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳಾದ ಹಾಲಸಿದ್ದಪ್ಪ ಪೂಜಾರಿ ಅವರು ಹೇಳಿದರು.

ಮಾರ್ಚ್ 17ರ ಮಂಗಳವಾರ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ 10ನೇ ತರಗತಿ, ಪಿಯುಸಿ ನಂತರ ವೃತ್ತಿ ಪ್ರಪಂಚದ ಅರಿವು ಮೂಡಿಸಲು ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ತಂದೆ- ತಾಯಿಯವರ ಕನಸುಗಳನ್ನು ಈಡೇರಿಸಬೇಕು. ವಿದ್ಯಾರ್ಥಿಗಳು ಕೌಶಲದ ಕಡೆ ಗಮನಹರಿಸಬೇಕು. ಎಐ ಬಗ್ಗೆ ವಿದ್ಯಾರ್ಥಿಗಳು ಸರಿಯಾಗಿ ತಿಳಿದುಕೊಳ್ಳಬೇಕು. ಹತ್ತನೇ ಹಾಗೂ ದ್ವಿತೀಯ ಪಿಯುಸಿ ನಂತರ ಕೋರ್ಸುಗಳ ಆಯ್ಕೆಗೆ ಈ ಮೇಳ ಸಹಕಾರಿಯಾಗಿದೆ ಎಂದರು.

ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿಸಿಲಿನ ತಾಪಮಾನ ಏರಿಕೆಯಾಗಿದ್ದು, ವಿದ್ಯಾರ್ಥಿಗಳು ತಮ್ಮ ಆರೋಗ್ಯ ಕಡೆಗೆ ಹೆಚ್ಚಿನ ಕಾಳಜಿ ವಹಿಸಬೇಕು. ಸರಿಯಾದ ಸಮಯಕ್ಕೆ ಹೆಚ್ಚಾಗಿ ನೀರು ಕುಡಿಯಬೇಕು. ಜಿಲ್ಲಾಡಳಿತದಿಂದ ಈ ಬಗ್ಗೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದೆ. ಅವುಗಳನ್ನು ಎಲ್ಲರೂ ಪಾಲಿಸಬೇಕು ಎಂದರು.

ಈ ವೇಳೆ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ ಅವರು ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ವೃತ್ತಿಪರ ಕೌಶಲ್ಯಗಳನ್ನು ಬೆಳೆಸಿಕೊಂಡು ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕು ಎಂದರು.

ವಿವಿಧ ಮಳಿಗೆ ಉದ್ಘಾಟನೆ: ನಗರದ ರಂಗಮದಿರದ ಆವರಣದಲ್ಲಿ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ವಿಶೇಷ ಅವಕಾಶ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣ, ವಿದ್ಯಾರ್ಥಿ ವೇತನ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಸಮಗ್ರ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿದ್ದ ವಿವಿಧ ಮಳಿಗೆಗಳಿಗೆ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ ಅವರು ಚಾಲನೆ ನೀಡಿದರು.

ಮಳಿಗೆಯಲ್ಲಿ ಕೃಷಿ ವಿಶ್ವವಿದ್ಯಾಲಯ ಅಡಿಯಲ್ಲಿನ ಕೋರ್ಸ್ಗಳ ಮಾಹಿತಿ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾ ಆರೋಗ್ಯ ಇಲಾಖೆ, ಕಾರ್ಮಿಕ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಸರ್ಕಾರಿ ಇಲಾಖೆಗಳಿಂದ ವಿವಿಧ ಶಿಕ್ಷಣಾವಕಾಶಗಳು, ತಾಂತ್ರಿಕ ಶಿಕ್ಷಣ, ಐಟಿಐ, ಡಿಪ್ಲೋಮಾ, ಎಂಜಿನಿಯರಿಂಗ್, ಮೆಡಿಕಲ್, ಕೌಶಲ್ಯ ತರಬೇತಿ, ಕೃಷಿ, ಕಂಪ್ಯೂಟರ್ ಕೋರ್ಸಗಳು, ವಿದ್ಯಾರ್ಥಿ ವೇತನ, ತರಬೇತಿ ಕೇಂದ್ರಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು.

1,407ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿ: ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳದಲ್ಲಿ ಜಿಲ್ಲೆಯ ವಿವಿಧ ಶಾಲೆಯ 1,407ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿಯನ್ನು ಮಾಡಿಕೊಳ್ಳುವ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಕರಿಯರ್ ಮೇಳದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಕರಿಯರ್ ರಥವನ್ನು ಎಳೆಯಲಾಯಿತು.

ಇದಕ್ಕೂ ಮುಂಚೆ ದೇವದುರ್ಗ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಲ್ಲಿಕಾರ್ಜುನ ಅವರಿಂದ ಭಾರತ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು.

ಇದೇ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರಿ ಉಪ ನಿರ್ದೇಶಕರಾದ ಸೋಮಶೇಖರಪ್ಪ ಹೋಕ್ರಾಣಿ, ಡಯಟ್ ಪ್ರಾಂಶುಪಾಲರು ಹಾಗೂ ಅಭಿವೃದ್ಧಿ ಉಪ ನಿರ್ದೇಶಕರಾದ ಚಂದ್ರಶೇಖರ ಭಂಡಾರಿ, ಡಯಟ್ ಹಿರಿಯ ಉಪನ್ಯಾಸಕರಾದ ಶಿವಮ್ಮ, ಶರಣಪ್ಪ ವಟಗಲ್, ಡಯಟ್ ನೋಡಲ್ ಅಧಿಕಾರಿ ಸುಖದೇವ್, ಶಿವಮಣಿ ಸೇರಿದಂತೆ ವಿವಿಧ ಶಾಲಾ ಹಾಗೂ ಕಾಲೇಜಿನ ಶಿಕ್ಷಕರು, ಉಪನ್ಯಾಸರು, ವಿದ್ಯಾರ್ಥಿಗಳು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬಂಗಾಳ ಚುನಾವಣೆ 74 ಶಾಸಕರಿಗೆ ಕೋಕ್; ಆಡಳಿತ ವಿರೋಧಿ ಅಲೆ ಜಯಿಸುವರೇ ಮಮತಾ?



ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ದಿನಾಂಕ ನಿಗದಿಯಾಗಿದೆ. ಏಪ್ರಿಲ್ 23 ಮತ್ತು 29ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ಆಡಳಿತ ಮತ್ತು ವಿಪಕ್ಷಗಳು ಚುನಾವಣೆಗೆ ಸಜ್ಜಾಗಿವೆ. ಬಂಗಾಳದ ಪ್ರಮುಖ ವಿಪಕ್ಷ ಬಿಜೆಪಿ ತನ್ನ ಮೊದಲ ಪಟ್ಟಿಯಲ್ಲಿ 144 ಅಭ್ಯರ್ಥಿಗಳ ಘೋಷಿಸಿದೆ. ಆಡಳಿತಾರೂಢ ಟಿಎಂಸಿ, 294 ಕ್ಷೇತ್ರಗಳ ಪೈಕಿ 291 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಮಂಗಳವಾರ ಪ್ರಕಟಿಸಿದೆ. ಡಾರ್ಜಿಲಿಂಗ್ ಜಿಲ್ಲೆಯ ಉಳಿದ ಮೂರು ಸ್ಥಾನಗಳನ್ನು ಮಿತ್ರಪಕ್ಷ ಭಾರತೀಯ ಗೂರ್ಖಾ ಪ್ರಜಾಂತ್ರಿಕ ಮೋರ್ಚಾಕ್ಕೆ ಬಿಟ್ಟುಕೊಟ್ಟಿದೆ.

ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಪ್ರಬಲ ಹೋರಾಟ ನಡೆಸುತ್ತಿರುವ ಹೊರತಾಗಿಯೂ ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಟಿಎಂಸಿ, ಮತದಾನದ ಮೇಲೆ ಈ ಅಲೆ ಪ್ರಭಾವಿಸದಂತೆ ತಡೆಯಲು 74 ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿದೆ. ಹೊಸಬರಿಗೆ ಮಣೆ ಹಾಕಿದೆ. ಟಿಕೆಟ್ ವಂಚಿತರಾದವರಲ್ಲಿ ಮಾಜಿ ಕ್ರಿಕೆಟಿಗ ಮನೋಜ್ ತಿವಾರಿ, ವಿವೇಕ್ ಗುಪ್ತಾ, ಸಾವಿತ್ರಿ ಮಿತ್ರಾ, ರತ್ನ ದೆ ನಾಗ್, ಪರೇಶ್ ಪಾಲ್ ಮತ್ತು ಕಾಂಚನ್ ಮಲ್ಲಿಕ್ ಅವರಂತಹ ಪ್ರಮುಖ ಹೆಸರುಗಳಿವೆ. ಕ್ಷೇತ್ರದ ಮಟ್ಟದ ಸಮೀಕ್ಷೆ ಮತ್ತು ಪ್ರತಿಕ್ರಿಯೆಯ ಆಧಾರದ ಮೇಲೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಅಲ್ಲದೆ, ಕಳೆದ ಚುನಾವಣೆಯಂತೆಯೇ, ಈ ಬಾರಿಯೂ ಮಹಿಳೆಯರಿಗೆ ಮನ್ನಣೆ ನೀಡಲಾಗಿದ್ದು, ಒಟ್ಟು 52 ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಭದ್ರಕೋಟೆ ಭವಾನಿಪುರದಲ್ಲಿ ಸ್ಪರ್ಧಿಸಿದ್ದಾರೆ. ಅವರಿಗೆ, ಅವರ ಮಾಜಿ ಭಂಟ ಹಾಲಿ ಎದುರಾಳಿ ಸುವೇಂದು ಅಧಿಕಾರಿಯೇ ಪೈಪೋಟಿ ನೀಡಲಿದ್ದಾರೆ.

ಬಂಗಾಳದಲ್ಲಿ 2011ರಿಂದ ಮೂರು ಬಾರಿ ಆಡಳಿತ ನಡೆಸಿರುವ ಟಿಎಂಸಿ ಸ್ಥಳೀಯ ಮಟ್ಟದಲ್ಲಿ ಆಡಳಿತ ವಿರೋಧಿ ಅಲೆ ಎದುರಿಸುತ್ತಿದೆ. ಸ್ಥಳೀಯ ಮಟ್ಟದಲ್ಲಿ ಹಲವು ಜಿಲ್ಲೆಗಳಲ್ಲಿ, ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಜನರಲ್ಲಿ ಅಸಮಾಧಾನ ಹೆಚ್ಚಾಗಿದೆ. ಭ್ರಷ್ಟಾಚಾರದ ಆರೋಪಗಳು, ಸ್ಥಳೀಯ ನಾಯಕರ ಅತಿಯಾದ ಆಧಿಪತ್ಯ, ಉದ್ಯೋಗ ಕೊರತೆ, ಕಟ್ಟಡಗಳು ಮತ್ತು ರಸ್ತೆಗಳ ನಿರ್ವಹಣೆಯ ಕೊರತೆ, ಜನರೊಂದಿಗಿನ ಸಂಪರ್ಕ ಕಡಿತದಂತಹ ಮಮತಾ ಸರ್ಕಾರದ ವಿರುದ್ಧ ಹೆಚ್ಚಾಗಿದೆ. ಜೊತೆಗೆ, ಕೋಲ್ಕತ್ತಾದ ಆರ್‌ಜಿ ಕರ್ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಅತ್ಯಾಚಾರ-ಕೊಲೆ ಪ್ರಕರಣ, ಸಂದೇಶ್‌ಖಾಲಿ ಪ್ರಕರಣದಂತಹ ಗಂಭೀರ ವಿಚಾರಗಳು ಜನರಲ್ಲಿ ಸರ್ಕಾರದ ಮೇಲೆ ಅಸಹನೆ ಸೃಷ್ಟಿಸಿದೆ. ಮಮತಾ ಅವರಿಗೆ ಆಡಳಿತ ವಿರೋಧಿ ಅಲೆಯನ್ನು ನಿಭಾಯಿಸಿ, ಬಿಜೆಪಿಯನ್ನು ಅಧಿಕಾರದಿಂದ ದೂರವಿಟ್ಟು, ತಾವು ಅಧಿಕಾರ ಉಳಿಸಿಕೊಳ್ಳುವುದು ಅತ್ಯಂತ ನಿರ್ಣಾಯಕವೂ, ಗಂಭೀರ ಸವಾಲೂ ಆಗಿದೆ.

ಈ ಆಡಳಿತ ವಿರೋಧಿ ಅಲೆಯನ್ನು ನಿಯಂತ್ರಿಸಿ, ಜನರ ಮನಸ್ಸು ಗೆಲ್ಲಲು ಮಮತಾ ಹೊಸ ತಂತ್ರ ಹೆಣೆದಿದ್ದಾರೆ. ಜನರ ವಿರೋಧ ಎದುರಿಸುತ್ತಿರುವ 74 ಶಾಸಕರನ್ನು (ಒಟ್ಟು ಶಾಸಕರಲ್ಲಿ 33%) ಕೈಬಿಟ್ಟಿದ್ದಾರೆ. ಹೊಸಬರು, ಯುವಜನರು ಹಾಗೂ ಸಮಾಜದ ವಿವಿಧ ವರ್ಗಗಳಿಂದ ಬಂದವರನ್ನು ಆಯ್ಕೆ ಮಾಡಿದ್ದಾರೆ. ಪಟ್ಟಿಯಲ್ಲಿ ಸುಮಾರು 135 ಹಾಲಿ ಶಾಸಕರನ್ನು ಮಾತ್ರ ಮರುನಾಮಕರಣ ಮಾಡಿದ್ದಾರೆ. ಮಾತ್ರವಲ್ಲದೆ, ಆಯ್ಕೆಯಾದ ಒಟ್ಟು ಅಭ್ಯರ್ಥಿಗಳಲ್ಲಿ 177 ಮಂದಿ ಅಭ್ಯರ್ಥಿಗಳು 60 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಅವರಲ್ಲಿ, 52 ಮಹಿಳೆಯರು, 47 ಮುಸ್ಲಿಂ, 78 ಹಾಗೂ 17 ಅಭ್ಯರ್ಥಿಗಳಿದ್ದಾರೆ.

ಇದು ಸ್ಪಷ್ಟವಾಗಿ, ಚುನಾವಣೆಯಲ್ಲಿ ಯುವ ಶಕ್ತಿ, ವೈವಿಧ್ಯತೆ ಹಾಗೂ ಎಲ್ಲ ವರ್ಗಗಳನ್ನು ಒಳಗೊಳ್ಳುವ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಪ್ರಯತ್ನದಂತೆ ಕಾಣುತ್ತದೆ.

ಸ್ಥಳೀಯವಾಗಿ ಜನರ ವಿರೋಧ ಎದುರಿಸುತ್ತಿರುವ ಶಾಸಕರನ್ನು ಮಮತಾ ಕೈಬಿಟ್ಟಿದ್ದಾರೆ. ಆದಾಗ್ಯೂ, ಇದಷ್ಟೇ ಬಂಗಾಳವನ್ನು ಮತ್ತೆ ಗೆಲ್ಲಲು ಸಾಧ್ಯವಾಗದು ಎಂದು ಅರಿತಿರುವ ಮಮತಾ, ಮತ್ತೊಂದು ಪ್ರಬಲ ದಾಳ ಉರುಳಿಸುತ್ತಿದ್ದಾರೆ. ಅಂದು, ಬಿಜೆಪಿಯನ್ನು ಹೊರಗಿನವರು ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸಿ, ಬಂಗಾಳ ದೆಹಲಿ ಸರ್ಕಾರ (ಕೇಂದ್ರ ಸರ್ಕಾರ) ಎಂದು ಬಿಂಬಿಸಿವುದು. ಆ ಮೂಲಕ, ಚುನಾವಣೆಯನ್ನು ಸ್ಥಳೀಯರು ಹೊರಗಿನವರ ನಡುವಿನ ಹೋರಾಟವಾಗಿ ಮಾರ್ಪಡಿಸುತ್ತಿದ್ದಾರೆ.

ಅದರ ಭಾಗಿವಾಗಿಯೇ, ಅಭ್ಯರ್ಥಿಗಳನ್ನು ಘೋಷಿಸಿದ ಸಮಯದಲ್ಲಿಯೂ ಮಮತಾ, ''ಇದು ನನ್ನ ಸರ್ಕಾರದ ವಿರುದ್ಧದ ಚುನಾವಣೆಯಲ್ಲ. ಇದು ಬಂಗಾಳದ ಗೌರವ ಮತ್ತು ಸ್ವಾಭಿಮಾನದ ಹೋರಾಟ. ಚುನಾವಣಾ ಆಯೋಗದ ಮತದಾರರ ಪಟ್ಟಿ ಪರಿಶೀಲನೆಯಲ್ಲಿ ಲಕ್ಷಾಂತರ ಹೆಸರುಗಳು ತೆಗೆದುಹಾಕಿದೆ. ಇದು ಬಿಜೆಪಿಗಾಗಿ ಮತಗಳನ್ನು ಅಳಿಸುವ ಷಡ್ಯಂತ್ರ. ಹೊರಗಿನವರು (ಬಿಜೆಪಿ) ಬಂಗಾಳವನ್ನು ಆಕ್ರಮಿಸಿಕೊಳ್ಳಲು ನೋಡುತ್ತಿದ್ದಾರೆ. ಅವರಿಗೆ ಅವಕಾಶ ಕೊಡುವುದಿಲ್ಲ'' ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕೇಂದ್ರ ತನಿಖಾ ಸಂಸ್ಥೆಗಳಾದ ಇಡಿ, ಸಿಬಿಐಗಳನ್ನು ಬಂಗಾಳದ ಮೇಲೆ ಛೂಬಿಟ್ಟಿದೆ. ಅನುದಾನ ಕಡಿತದೊಂದಿಗೆ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಹವಣಿಸಿದೆ. ಇದು, ಬಂಗಾಳದ ಸಂಸ್ಕೃತಿ ಮತ್ತು ಸ್ವಾಯತ್ತತೆಯ ಮೇಲಿನ ದಾಳಿಯಾಗಿದೆ ಎಂದು ಮಮತಾ ಪ್ರತಿಪಾದಿಸಿದ್ದಾರೆ. ಮಾ-ಮಾಟಿ-ಮಾನುಷ್ ಘೋಷಣೆಯನ್ನು ಮೊಳಗಿಸುತ್ತಿದ್ದಾರೆ.

ಈ ಪ್ರತಿಪಾದನೆಗಳು ಬಂಗಾಳದ ಮುಸ್ಲಿಂ, ಮಹಿಳೆಯರು, / ಸಮುದಾಯಗಳು ಹಾಗೂ ಬಂಗಾಳಿ ಅಭಿಮಾನಿಗಳನ್ನು ಒಗ್ಗೂಡಿಸುವ ಪ್ರಯತ್ನವಾಗಿದೆ.

ಒಂದು ವೇಳೆ, ಅಭ್ಯರ್ಥಿಗಳ ಬದಲಾವಣೆ ಮತ್ತು ಸ್ಥಳೀಯರು ಹೊರಗಿನವರು ಈ ಎರಡೂ ತಂತ್ರಗಳು 2021ರ ಚುನಾವಣೆಯಲ್ಲಿ ಯಶಸ್ವಿಯಾಗಿದ್ದವು. ಆಗಲೂ ಆಡಳಿತ ವಿರೋಧಿ ಭಾವನೆ ಇತ್ತು. ಆದರೆ, ಮಮತಾ ಅವರು ಚುನಾವಣೆಯನ್ನು ಬಂಗಾಳದ ಸ್ವಾಭಿಮಾನದ ಹೋರಾಟದ ಪ್ರತಿಪಾದನೆಯನ್ನು ಮುನ್ನೆಲೆಗೆ ತಂದರು, ಹಲವು ಅಭ್ಯರ್ಥಿಗಳನ್ನು ಬದಲಿಸಿದರು. ಪರಿಣಾಮ, 215 ಸ್ಥಾನಗಳನ್ನು ಗೆದ್ದರು. ಈಗಲೂ ಅದೇ ಫಾರ್ಮುಲಾವನ್ನು ಬಳಸುತ್ತಿದ್ದಾರೆ. ಇದು ಕೆಲಸ ಮಾಡಬಹುದು ಎಂಬ ವಿಶ್ವಾಸ ಅವರಿಗಿದೆ. ಅವರು 226ಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲುವ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ.

ಆದಾಗ್ಯೂ, ಈ ಬಾರಿ ಸವಾಲುಗಳು ಭಿನ್ನವಾಗಿಯೂ-ಪ್ರಬಲವಾಗಿಯೂ ಇವೆ. 15 ವರ್ಷಗಳ ಆಡಳಿತದ ನಂತರ ಉದ್ಯೋಗ ಕೊರತೆ, ಭ್ರಷ್ಟಾಚಾರದ ಆರೋಪಗಳು, ಕಾನೂನು ಸುವ್ಯವಸ್ಥೆಯ ಕೊರತೆಯಂತಹ ಗಂಭೀರ ಸಮಸ್ಯೆಗಳು ಜನರಲ್ಲಿ ಅಸಮಾಧಾನವನ್ನು ಹೆಚ್ಚಿಸಿದೆ. ಬಿಜೆಪಿ 2021ರಲ್ಲಿ 77 ಸ್ಥಾನಗಳನ್ನು ಗೆದ್ದು ಈಗ ಬಲವಾದ ವಿರೋಧ ಪಕ್ಷವಾಗಿ ಬೆಳೆದಿದೆ. ಹಿಂದು ಮತದಾರರ ಕ್ರೋಢೀಕರಣ ಮತ್ತು ಮತುವಾ ಸಮುದಾಯದ ಬೆಂಬಲ ಗಳಿಕೆಯಲ್ಲಿ ಬಿಜೆಪಿ ಭಾಗಶಃ ಯಶಸ್ಸು ಕಂಡಿರುವಂತೆ ಮೇಲ್ನೋಟಕ್ಕೆ ಕಂಡುಬರುತ್ತಿದೆ. ಜೊತೆಗೆ, ಎಸ್‌ಐಆರ್ ಮೂಲಕ ಮತದಾರ ಪಟ್ಟಿಯ ಬದಲಾವಣೆಯೂ ಟಿಎಂಸಿಗೆ ಹೊಡೆತವನ್ನೂ, ಬಿಜೆಪಿಗೆ ಅನುಕೂಲವನ್ನೂ ಮಾಡಿಕೊಡಬಹುದಾದ ಸಾಧ್ಯತೆಗಳೂ ಹೆಚ್ಚಿವೆ.

ಆದರೂ, ಮಮತಾ ಮತ್ತೊಮ್ಮೆ ಗೆಲುವಿನ ವಿಶ್ವಾಸದಲ್ಲಿದ್ದಾರೆ. ಮಹಿಳೆಯರು, ಮುಸ್ಲಿಂ ಮತದಾರರು, / ಸಮುದಾಯಗಳು ಇನ್ನೂ ಟಿಎಂಸಿ ಜೊತೆಗೆ ಬಲವಾಗಿ ನಿಂತಿವೆ. ಪಕ್ಷದ ಗ್ರಾಮೀಣ ಮತ್ತು ನಗರ ಸಂಘಟನೆಯೂ ಬಲವಾಗಿದೆ. ಬಿಜೆಪಿ ಇನ್ನೂ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸದೆ ಇರುವುದು ಮತ್ತು ಆಂತರಿಕ ಬಿಕ್ಕಟ್ಟು ಎದುರಿಸುತ್ತಿರುವುದು ಟಿಎಂಸಿಗೆ ಅನುಕೂಲ ಮಾಡಿಕೊಡುವ ಸಾಧ್ಯತೆಗಳಿವೆ.

ಮಮತಾ ಹೊಸ ಮುಖಗಳ ಮೂಲಕ ಆಡಳಿತ ವಿರೋಧಿ ಅಲೆಯನ್ನು ನಿಯಂತ್ರಿಸಿ, ಚುನಾವಣೆಯನ್ನು ಬಂಗಾಳದ ಸ್ವಾಭಿಮಾನದ ಹೋರಾಟವನ್ನಾಗಿ ಬದಲಾಯಿಸಿದರೆ, 4ನೇ ಅವಧಿಯ ಗೆಲುವು ಟಿಎಂಸಿಯದ್ದಾಗುತ್ತದೆ.

ಹೊಸತನದ ನವ ಚೈತನ್ಯಕ್ಕೆ ಸ್ವಾಗತ ಯುಗಾದಿ ಹಬ್ಬ

ಹಸಿರನುಟ್ಟ ಪ್ರಕೃತಿಯ ಸೊಬಗು ಮನವರಳಿಸುವ ವಸಂತದ ಬೆರಗು

ಭಾರತ ಪುರಾತನ ಕಾಲದಿಂದಲೂ ವಿಶೇಷತೆಯನ್ನುಪಡೆದ ದೇಶವಾಗಿದ್ದುಸಾಂಸ್ಕೃತಿಕಸಿರಿವಂತಿಕೆಯನ್ನುಹೊಂದಿವಿಶ್ವಕ್ಕೆಲ್ಲ ಅರಿವಿನ ಕಿರಣ ಚೆಲ್ಲಿವಿಶ್ವಗುರುವಾಗಿದೆ. ಇಂತಹಭಾರತದಪರ್ವತ ತಪ್ಪಲುಗಳಲ್ಲಿ, ನದಿ ತೀರಗಳಲ್ಲಿ ಋಷಿಮುನಿಗಳು ಕುಟೀರಗಳನ್ನು ಕಟ್ಟಿಕೊಂಡು ತಪವನ್ನಾಚರಿಸಿದಪುಣ್ಯಭೂಮಿಯಾಗಿದೆ. ಅಂತಹ ಪರಮಪಾವನ ಋಷಿಮುನಿಗಳ ಆಶೀರ್ವಾದಪಡೆಯಲು ದೇವಲೋಕದಿಂದ ದೇವೇಂದ್ರನನ್ನುಮೊದಲ್ಗೊಂಡು ದೇವತೆಗಳು, ಅಷ್ಟದಿಕ್ಪಾಲಕರುಬರುತ್ತಿದ್ದರಿಂದ ಈ ನೆಲದ ಜೊತೆ ಅವರುಸಂಪರ್ಕ ಇಟ್ಟುಕೊಂಡಿದ್ದರು. ಆದ್ದರಿಂದ ಭಾರತದಮಣ್ಣಿನ ಕಣ ಕಣವು ಪುನೀತವಾಗಿದೆ. ಈ ನೆಲ ಕರ್ಮಭೂಮಿ, ದೇವಭೂಮಿ, ಮಾತ್ರವಲ್ಲದೆ ದೇವತೆಗಳು, ಗಂಧರ್ವರು ಯಕ್ಷರು, ನಾಗರು, ಕಿನ್ನರು, ಹಾಗೂ ದೇವಲೋಕದ ಸ್ತ್ರೀಯರಿಗೆ ವಿಹಾರ ಭೂಮಿ ಆಗಿತ್ತೆಂಬ ಪ್ರತೀತಿ ಇದೆ. ಆದ್ದರಿಂದ ಏ ವಂದನ್ ಕೀ ಭೂಮಿ ಹೈ, ಅಭಿನಂದನ್ ಕೀ ಭೂಮಿ ಹೈ, ಔರ್ ಏಕ್ ಮಾತ್ರ್ ತರ್ಪಣ್ ಕೀ ಭೂಮಿ ಹೈ ಎಂದು ವಾಜಪೇಯಿಯವರು ಬರೆದಿರುವುದನ್ನು ನಾವು ಸ್ಮರಿಸಿಕೊಳ್ಳಬಹುದು. ಇಂತಹ ಪಾವನ ನೆಲ ಭಾರತದಲ್ಲಿ ಆಚರಿಸುವ ಪ್ರತಿಯೊಂದು ಹಬ್ಬ, ಹರಿದಿನಗಳಿಗೆ ತನ್ನದೇ ಆದ ಪೌರಾಣಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿರುವದನ್ನು ನಾವು ಕಾಣುತ್ತೇವೆ.ಅದರಂತೆ ಗಿಡಮರಗಳು ತಮ್ಮ ಒಣಗಿದ ಎಲೆಗಳನ್ನು ಉದುರಿಸಿ ಹೊಸ ಚಿಗುರು ಕಂಡು ಹಸಿರನುಟ್ಟ ಪ್ರಕೃತಿಯ ಸೊಬಗಿನ ಹಬ್ಬ ಯುಗಾದಿ ಆದ್ದರಿಂದ ಯುಗ ಯುಗ ಕಳೆದರೂ ಯುಗಾದಿ ಮರಳಿ ಬರುತಿದೆ ಎಂದು ದ.ರಾ.ಬೇಂದ್ರೆಯವರು ಬರೆದಿದ್ದಾರೆ.

ಯುಗಾದಿಯು ಹಿಂದೂ ಪಂಚಾಂಗದ ಪ್ರಕಾರ ಚೈತ್ರ ಶುದ್ಧ ಪಾಡ್ಯಮಿಯಂದು ಆಚರಿಸುವ ಹೊಸ ವರ್ಷದಹಬ್ಬ. ಪೌರಾಣಿಕವಾಗಿ ನೋಡುವುದಾದರೆಸೋಮಕಾಸುರ ಎಂಬ ರಾಕ್ಷಸನುವೇದಗಳನ್ನು ಚಾಪೆಯಂತೆಸುತ್ತಿ ಕದ್ದೊಯ್ದುಸಾಗರದ ಆಳದಲ್ಲಿಮುಚ್ಚಿಟ್ಟದ್ದರಿಂದ, ಮಹಾವಿಷ್ಣು ತನ್ನಮೊದಲ ಅವತಾರವಾದಮತ್ಸ್ಯಾವತಾರದಲ್ಲಿ ಆ ವೇದಗಳನ್ನು ತಂದುಬ್ರಹ್ಮನಿಗೆ ಕೊಟ್ಟದಿನವೆಂದು, ಆನಂತರಬ್ರಹ್ಮನುಸೃಷ್ಟಿ ಕಾರ್ಯ ಆರಂಭಮಾಡಿದ ಈ ದಿನದಂದುಬ್ರಹ್ಮಾಂಡ ವನ್ನುಸೃಷ್ಟಿಸಿದನು ಎಂದುನಂಬಲಾಗಿದೆ. ಈ ದಿನದಿಂದಲೇ ಹೊಸ ಯುಗ ಆರಂಭವಾಯಿತು, ಆದ್ದರಿಂದ ಇದನ್ನು' ಯುಗಾದಿ' (ಯುಗ+ಆದಿ) ಎಂದು ಕರೆಯುತ್ತಾರೆ.ಅದರಂತೆ ಶ್ರೀರಾಮನು ಅಯೋಧ್ಯೆಗೆ ಮರಳಿ ಪಟ್ಟಾಭಿಷಿಕ್ತನಾದ ದಿನವೆಂತಲೂ, ಸತ್ಯಯುಗ ಆರಂಭವಾದ ದಿನವೆಂತಲೂ ಪ್ರತೀತಿ ಇದೆ. ಬೇವು-ಬೆಲ್ಲದ ಸವಿಯೊಂದಿಗೆ ಜೀವನದ ಕಷ್ಟ-ಸುಖಗಳನ್ನುಸಮಾನವಾಗಿ ಸ್ವೀಕರಿಸುವಸಂಕಲ್ಪದೊಂದಿಗೆ ಈ ಹಬ್ಬವನ್ನು ಆಚರಿಸಲಾಗುತ್ತದೆ.

ಜೀವನವು ಕೇವಲ ಸುಖವಲ್ಲ, ಕಷ್ಟ-ಸುಖಗಳ (ಬೇವಿನ ಕಹಿಮತ್ತುಬೆಲ್ಲದಸಿಹಿ) ಮಿಶ್ರಣ. ಇದನ್ನುಸಮ ತೋಲನದಿಂದಸ್ವೀಕರಿಸಬೇಕು ಎಂಬ ತತ್ವವನ್ನು ಇದು ತಿಳಿಸುತ್ತದೆ. ಅಲ್ಲದೆ, ಇದು ಆರೋಗ್ಯದಸಂಕೇತವೂಹೌದು. ಗೌತಮಿಪುತ್ರಶಾತಕರ್ಣಿಯುಶಕರಮೇಲೆ ಜಯಗಳಿಸಿ ದನೆನಪಿಗಾಗಿ ಶಾಲಿವಾಹನಶಕೆ ಎಂದುಹೊಸವರ್ಷವನ್ನು ಆಚರಿಸಲಾಗುತ್ತದೆ.ವಸಂತ ಋತುವಿನ ಆರಂಭದಲ್ಲಿ ಪ್ರಕೃತಿಯಲ್ಲಿಹೊಸ ಚಿಗುರು, ಹೂವುಗಳು ಅರಳುವ ಸಮಯ. ಇದು ಲವಲವಿಕೆ ಮತ್ತು ಹೊಸ ಆರಂಭದ ಸಂಕೇತವಾಗಿದೆ. ವಸಂತ ಋತುವು ಭಾರತೀಯ ಕ್ಯಾಲೆಂಡರ್‌ನ ಆರು ಋತುಗಳಲ್ಲಿ ಅತ್ಯಂತ ಸುಂದರವಾದುದು ಆದ್ದರಿಂದ ಇದನ್ನು 'ಋತುಗಳ ರಾಜ' ಎಂದು ಕರೆಯಲಾಗುತ್ತದೆ. ಚಳಿಗಾಲದ ನಂತರ ಪ್ರಕೃತಿಯಲ್ಲಿ ಹೊಸ ಚಿಗುರು, ಹೂವುಗಳು, ಹಕ್ಕಿಗಳ ಕಲರವ ಮತ್ತು ಮಂದ ಮಾರುತದಿಂದ ಕೂಡಿದ ಹರ್ಷದಾಯಕಸಮಯವಾಗಿದ್ದು,ಕೃಷಿಕರಸುಗ್ಗಿಸಮಯವಾಗಿದೆ. ಮರಗಳುಹಳೆಯ ಎಲೆಗಳನ್ನು ಉದುರಿಸಿ, ಹೊಸ ಚಿಗುರು ಮತ್ತು ಬಣ್ಣಬಣ್ಣದ ಹೂವುಗಳಿಂದ ಕಂಗೊಳಿಸುತ್ತವೆ. ಅತಿಯಾದ ಚಳಿಯೂ ಇಲ್ಲದ, ಅತಿಯಾದ ಬಿಸಿಯೂ ಇಲ್ಲದ ಹಿತವಾದ ವಾತಾವರಣವಿರುತ್ತದೆ. ಹಕ್ಕಿಗಳ ಕಲರವ, ಕೋಗಿಲೆಯ ಮಧುರವಾದ ಗಾನ ವಸಂತದ ಆಗಮನವನ್ನು ಸಾರುತ್ತದೆ.

ಕವಿಗಳಿಗೆ ವಸಂತ ಋತು ಅತ್ಯಂತ ಪ್ರಿಯವಾದದ್ದು, ಆದ್ದರಿಂದ ಚಿ. ಉದಯಶಂಕರ ರಚನೆಯ ಡಾ. ರಾಜಕುಮಾರ ಅವರ ಕಂಠಸಿರಿಯಲ್ಲಿ ಮೂಡಿ ಬಂದ ಹಾಡು

ವಸಂತ ಕಾಲ ಬಂದಾಗ
ಮಾವು ಚಿಗುರಲೇ ಬೇಕು ಕೋಗಿಲೆ ಹಾಡಲೆ ಬೇಕು
ಕಂಕಣ ಕೂಡಿ ಬಂದಾಗ ಮದುವೆ ಆಗಲೇ ಬೇಕು,
ಮಂಗಳ ವಾದ್ಯ ಮೊಳಗಲೇ ಬೇಕು
ಹೊಸ ಬಾಳ ಹೊಸಿಲಲ್ಲಿ, ನಸು ನಾಚಿ ನಿಂತಾಗ
ನಿನ್ನಂದ ನಾ ನೋಡ ಬೇಕು

ಎನ್ನುವುದು ಸರ್ವರಲ್ಲಿ ಜನಜನಿತವಾಗಿದೆ. ಬಿ.ಎಂ. ಶ್ರೀಯ ವರು ತಮ್ಮ ವಸಂತ ಕವನದಲ್ಲಿ

ವಸಂತ ಬಂದ ಋತುಗಳ ರಾಜ ತಾ ಬಂದ



ಚಿಗುರನು ತಂದ, ಹೆಣ್ಗಳ ಕುಣಿಸಿತ ನಿಂದ
ಚಳಿಯನು ಕೊಂದ, ಹಕ್ಕಿಗಳುಲಿಗಳ ಚೆಂದ
ಕೂವು, ಜಗ್ ಜಗ್, ಪುವ್ವೀ ಟೂವಿಟ್ಟವೂ

ಎಂದು ಹೊಸ ವರುಷವಸಂತದಾಗಮನದ ಕುರಿತುಬರೆದರೆ ಕೆ.ಎಸ್.ನರಸಿಂಹಸ್ವಾಮಿಯವರು

ಪರಿಮಳದ ತಂಗಾಳಿ ಹರಿದಾಡಿತು
ದುಂಬಿಗಳ ಸಂಗೀತ ಮೊದಲಾಯಿತು
ಬಿರಿದರಳ ಬಣ್ಣಗಳ ಹೊಳೆ ಹರಿಯಿತು
ಚೈತ್ರ, ವೈಶಾಖ ವಸಂತ ಋತು

ಎಂದು ಹೊಸ ಚಿಗುರಿನ ಗಿಡ ಮರಗಳಿಂದ ಸೂಸುವ ತಂಗಾಳಿಯಲಿ ದುಂಬಿಗಳ ಕಲರವದ ಝೇಂಕಾರ ಮತ್ತು ಹೂವುಗಳು ಅರಳಿದಾಗ ಉಂಟಾಗುವ ಬಣ್ಣಗಳ ಚೆಲ್ಲಾಟ, ಮರದ ತುದಿಯಲ್ಲಿನ ಮಾವಿನ ಚಿಗುರಿನ ಕುರಿತು ಬರೆಯುತ್ತಾರೆ.

ಬಂದ ಚೈತ್ರದ ಹಾದಿ ತೆರೆದಿದೆ
ಬಣ್ಣ ಬೆಡಗಿನ ಮೋಡಿಗೆ
ಹೊಸತು ವರ್ಷದಹೊಸತುಹರ್ಷದ
ಬೇವುಬೆಲ್ಲದಬೀಡಿಗೆ

ಈ ಜೀವನ ಎಂಬುದು ಬೇವು ಬೆಲ್ಲದ ಬೀಡು. ಇದನ್ನು ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಬೇಕು ಜೀವನದಲ್ಲಿ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕು ಆದ್ದರಿಂದ ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಬದುಕಿನ ಬಂಡಿಯನ್ನು ಸರಿಯಾಗಿ ನಡೆಸುವವನೇ ಬದುಕನ್ನು ಅರ್ಥಮಾಡಿಕೊಂಡವನಾಗುತ್ತಾನೆ. ಆದ್ದರಿಂದ ಮೇಲಿನ ಕವಿತೆಯಲ್ಲಿ ಕವಿ ಜಿ.ಎಸ್.ಶಿವರುದ್ರಪ್ಪನವರು ಇಂತಹ ಸುಮಧುರ ಜೀವನದಲ್ಲಿ ಚೈತ್ರದ ಹಾದಿ ತೆರೆದುಕೊಂಡಿದೆ ಎಂದರೆ ಪ್ರಕೃತಿಯಲ್ಲಿ ವಸಂತಾಗಮನದಿಂದ ಯಾವ ರೀತಿಯಾಗಿ ಹೊಸ ಚಿಗುರಿನ ಸೊಬಗು ಉದಯಿಸುತ್ತದೆಯೋ ಹಾಗೆಯೇ ಮಾನವನ ಜೀವನದಲ್ಲಿಯೂ ಹೊಸತನದ ಭಾವ ಉದಯಿಸುವ ಸುಗಳಿಗೆ ತೆರೆದುಕೊಂಡಿದೆ ಎಂಬ ಅರ್ಥದಲ್ಲಿ ಬಳಸಿಕೊಂಡು ಹಸಿರುಡುಗೆಯ ತೊಟ್ಟ ಭೂದೇವಿಯ ಮಡಿಲಿನಲ್ಲಿ ವಿವಿಧ ರೀತಿಯ ಬಣ್ಣ ಬಣ್ಣಗಳ ಹೂವುಗಳಿಂದ ಮೋಡಿ ಮಾಡಿದೆ ಎನ್ನುತ್ತಾ ಮುಂದುವರಿದು

ಕೊಂಬೆ ಕೊಂಬೆಯ ತುಂಬ
ಪುಟಿದಿದೆ ಅಂತರಂಗದ ನಂಬಿಕೆ
ಚಿಗುರು ಹೂವಿನ ಬಣ್ಣದಾರತಿ
ಯಾವುದೋ ಆನಂದಕೆ

ಕವಿಯ ಕವಿತೆಯಲ್ಲಿನ ಜೀವನದ ಪಾಠವನ್ನು ಅರಿಯುವ ಕೆಲಸ ನಾವು ಮಾಡಬೇಕಿದೆ. ಎಲೆಗಳುದಿರು ಬೋಳಾದ ಒಣಗಿದ ಗಿಡ ಮರಗಳು ವಸಂತಾಗಮನದಿಂದ ಹೊಸ ಚಿಗುರು ಪುಟಿದೆದ್ದು ಹೊಸ ಪರಿಮಳ ಸೂಸುವಂತೆ ಮಾನವ ಜೀವನದಲ್ಲಿ ಕಷ್ಟಗಳಿಂದನೊಂದುಬೆಂದರು ಅಂತರಂಗದನಂಬಿಕೆ ಚಿಗುರಿ ಬಾಳುಹೊಸತನಕೆ ತೆರೆದುಕೊಳ್ಳಬೇಕಾಗಿದೆ ಎಂದು ಕವಿಹೇಳುತ್ತಾನೆ.ಪ್ರಕೃತಿಯ ಸೊಬಗಿನ ಆರಾಧನೆಯೊಂದಿಗೆ ನಿತ್ಯೋತ್ಸವ ಗೀತೆಯನ್ನು ಕೊಟ್ಟ ಕವಿ ನಿಸಾರ್ ಅಹಮದ್ ಅವರು

ವರ್ಷಾದಿಯ ತಿಳಿನಗೆಯಮೊಗವೆ
ಶುಭ ಯುಗಾದಿ ಕರೆವಸೊಗವೆ
ಋತುಗಳ ಗಣನಾಯಕ
ಶರಣೆನ್ನುವೆಶುಭದಾಯಕ

ಎಂದು ಬರೆಯುತ್ತಾ ವಸಂತ ಋತು ಋತುಗಳ ಗಣನಾಯಕ ಎಂದು ಸಂಭೋದಿಸುತ್ತಾರೆ. ಏಕೆಂದರೆ ಈ ಸಮಯದಲ್ಲಿನ ನಿಸರ್ಗದ ಸೊಬಗು ಹೇಗಿರುತ್ತದೆ ಎಂದರೆ ಜಗದ ಒಳಿತು ಕೆಡಕುಗಳನ್ನರಿಯದ ಮಗುವಿನ ಮುಗ್ಧ ಮನಸ್ಸಿ ನಿಂದ ಮೂಡುವ ನಿಷ್ಕಲ್ಮಶವಾದನಗುವಿನಂತೆನಿರ್ಮಲತೆಯಿಂದ ಯುಗಾದಿಗೆ ಕೈಬೀಸಿ ಕರೆಯುವವಸಂತನಿನಗೆಶರಣೆನ್ನುವೆ ಎನ್ನುತ್ತಾರೆ. ಮಲ್ಲಿಗೆಯ ಕವಿ ಕೆ.ಎಸ್.ನರಸಿಂಹಸ್ವಾಮಿಯವರು ತಮ್ಮ ಮತ್ತೊಂದು ಯುಗಾದಿ ಕವಿತೆಯಲ್ಲಿ

ಮಾವುನಾವುಬೇವುನಾವು
ನೋವುನಲಿವುನಮ್ಮವು
ಹೂವುನಾವುಹಸಿರುನಾವು
ಬೇವುಬೆಲ್ಲನಮ್ಮವು

ಎನ್ನುತ್ತ ಮನುಜ ಕುಲಕ್ಕೆ ಜೀವನದ ಆದರ್ಶವನ್ನು ಎತ್ತಿ ತೋರುತ್ತಾರೆ. ನಮ್ಮ ಪ್ರಕೃತಿಯಲ್ಲಿ ಯಾವ ರೀತಿಯಾಗಿ ಸಿಹಿಯಾದ ಮಾವು ಮತ್ತು ಕಹಿಯಾದ ಬೇವು ಬೆಳೆಯುತ್ತೇವೆಯೋ ಹಾಗೆಯೇ ನಮ್ಮ ಬದುಕಿನಲ್ಲಿ ನೋವು ನಲಿವುಗಳನ್ನು ನಾವೇ ಸೃಷ್ಟಿಸಿಕೊಳ್ಳುತ್ತೇವೆ ಆದರೆ ಯಾವುದು ಶಾಶ್ವತವಲ್ಲ ಬೇವು ಬೆಲ್ಲ ಎರಡು ನಮ್ಮವೇ ಆಗಿರುವುದರಿಂದ ಸಮಭಾವದಿ ಜೀವನವನ್ನು ನಡೆಸಬೇಕೆನ್ನುತ್ತಾ

ಹೆಜ್ಜೆಗೊಂದು ಹೊಸ ಯುಗಾದಿ
ಚೆಲುವು ನಮ್ಮ ಜೀವನ
ನಮ್ಮ ಹಾದಿಯೋ ಅನಾದಿ
ಪಯಣವೆಲ್ಲ ಪಾವನ

ಎಂದು ನಮ್ಮ ಆಲೋಚನೆ, ವಿವೇಚನೆ ಮತ್ತು ಬದುಕಿನ ರೀತಿ ನೀತಿಗಳು ನಿತ್ಯ ನೂತನವಾಗಿದ್ದು ಪ್ರತಿಕ್ಷಣವೂ ಯುಗಾದಿಯಾಗಬೇಕು ಅಂದಾಗ ನಮ್ಮ ಜೀವನ ಚೆಲುವಿನಿಂದ ಕೂಡಿರುತ್ತದೆ, ಏಕೆಂದರೆ ನಮ್ಮ ಜೀವನದ ಹಾದಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದ ಪವಿತ್ರವಾದ ಪ್ರಯಾಣವಾಗಿದೆ ಎಂದಿದ್ದಾರೆ.ಮಲೆನಾಡಿನ ಪ್ರಕೃತಿಯ ಸೊಬಗನ್ನು ಪದಗಳಿಗೆ ನಿಲುಕದಂತೆ ವರ್ಣಿಸಿದ ಕವಿ ರಸಋಷಿ ಕುವೆಂಪು ಅವರು

ಸುರಲೋಕದ ಸುರನದಿಯಲಿ ಮಿಂದು
ಸುರಲೋಕದ ಸಂಪದವನು ತಂದು
ನವ ಸಂವತ್ಸರ ಭೂಮಿಗೆ ಬಂದು
ಕರೆಯುತಿದೆ ನಮ್ಮನು ಇಂದು

ತೊಲಗಲಿ ದು:ಖ, ತೊಲಗಲಿ ಮತ್ಸರ
ಪ್ರೇಮಕೆ ಮೀಸಲು ನವ ಸಂವತ್ಸರ
ನಮ್ಮೆದೆಯಲ್ಲಿದೆ ಸುಖನಿಧಿ ಎಂದು
ಹೊಸ ಹೂಣಿಕೆಯನು ತೊಡಗಿಂದು

ಎಂದು ವಸಂತಾಗಮನವು ದೇವಲೋಕದ ಪವಿತ್ರವಾದ ನದಿಯಲ್ಲಿ ಮಿಂದು ಸ್ವರ್ಗದ ಸಂಪತ್ತನ್ನೇ ಹೊತ್ತು ತರುವಂತದ್ದಾಗಿದೆ, ಅಂತಹ ನವ ಸಂವತ್ಸರ ನಮ್ಮನ್ನು ಕೈಬೀಸಿ ಕರೆಯುತ್ತಿದೆ ಎನ್ನುತ್ತಾ ಮಾನವರಾದ ನಮ್ಮ ಮನವು ಇಂತಹ ಪುಣ್ಯಪ್ರದವಾದ ದಿನಗಳಲಿ ದು:ಖವನ್ನು ಕೊನೆಗಾಣಿಸಬೇಕು, ಮತ್ಸರವನ್ನು ತೊಡೆದು ಹಾಕಿ ನೋವು ನಲಿವುಗಳನ್ನು, ಒಳಿತು ಕೆಡಕುಗಳನ್ನು ಒಟ್ಟಿಗೆ ಅನುಭವಿಸಬೇಕು ಏಕೆಂದರೆ ಈ ಮನುಷ್ಯ ಜನುಮಬೇವುಬೆಲ್ಲಗಳಸಮ್ಮಿಲನ ಎರಡನ್ನುಸರಿಯಾಗಿ ಸವಿದು ಜಯಿಸಿದವನೇವೀರನಾಗುತ್ತಾನೆ ಅಥವಾ ಜೀವನದಲಿ ಗೆಲ್ಲುತ್ತಾನೆ ಆದ್ದರಿಂದ ಇಂತಹ ಸುದಿನದಲ್ಲಿ ಹೊಸ ಪ್ರತಿಜ್ಞೆಯನ್ನು ತೊಟ್ಟು ಜೀವನದೋನ್ನತಿಗೆ ಅಡಿಯಿಡಬೇಕೆಂದು ಕವಿ ಹೇಳುತ್ತಾನೆ.

ಯುಗಯುಗಾದಿಯ ತೆರೆಗಳೇಳುತಿವೆ, ಬೀಳುತಿವೆ
ಹೊಸಹೊಸವು ಪ್ರತಿ ವರುಷವು;
ಒಳಗೆ ಅದೋ ಕಾಣುತಿದೆ ಚೆಲುವಿರದ
ನಲವಿರದ ಕೊಳೆಯಬೆಳೆ;- ರಂಗಮಂದಿರವು!

ಈ ಯುಗಾದಿಯ ಮಾತು ಕೇಳುತಿದೆ
ಮರಮರಳಿ ಮೊದಲಾಗುತ್ತಿದೆ
ಯುಗವು, ನರನ ಜಗವು; ವರುಷವರುಷವು
ನಮ್ಮಪಯಣ ಮೊದಲಾಗುತ್ತಿದೆ;
ಇದಕುಮಿಗಿಲಿಲ್ಲ, ಹಾ, ನರಗೆಸೊಗವು!

ವಸಂತಾಗಮನದ ಪ್ರಕೃತಿಯ ಸೊಬಗಿನ ವೈವಿಧ್ಯಮಯವಾದ ವರ್ಣನೆಗಳ ಮಧ್ಯದಲ್ಲಿ ಯುಗ ಯುಗಗಳಿಂದ ಪ್ರಕೃತಿಯಲ್ಲಿ ಕಾಲಕ್ಕೆ ತಕ್ಕಂತೆ ಹೊಸತನದ ಸೊಬಗನ್ನು ತೋರುವುದರಲ್ಲಿ ನಿಂತಿಲ್ಲ ಆದರೆ ಮಾನವನ ಅಂತರಂಗದ ಮನಸ್ಸಿಗೆ ಮಾತ್ರ ವಸಂತಾಗಮನವಾಗುತ್ತಿಲ್ಲ ಏಕೆಂದರೆ, ಹೊಸ ಯುಗದ ಆದಿಗೆ ಯುಗಾದಿಯೇನು ಮರಳಿ ಮರಳಿ ಬರುತಿದೆ ಆದರೆ ಈ ನೆಲದ ಮನುಷ್ಯನಲ್ಲಿಮಾತ್ರ ಅದೇ ಚೆಲುವಿರದನಲಿವಿರದ ಕೊಳೆಯಬೆಳೆಯನ್ನೇ ಕಾಣುತ್ತಿದ್ದೇವೆ. ಎಷ್ಟೇ ಯುಗಗಳು ಕಳೆದರೂ, ಯುಗಾದಿಮರಳಿಮರಳಿ ಬಂದರೂ, ಪ್ರತಿ ವರುಷವೂನವ ಜೀವನಕೆಮೊದಲಾಗುತಿದೆ ಈ ಜಗವು ಆದರೆ ಬದಲಾವಣೆ ಮಾತ್ರ ಕಾಣುತ್ತಿಲ್ಲ ಎಂದು ಕವಿ ಗೋಪಾಲಕೃಷ್ಣ ಅಡಿಗರು ತಮ್ಮ ಕಾವ್ಯದಮೂಲಕ ತಿಳಿಸುತ್ತಾರೆ. ಆದ್ದರಿಂದನಮ್ಮ ನೆಲದಪರಂಪರೆಯಲ್ಲಿ ಆಚರಣೆಗೊಳ್ಳುವಪ್ರತಿ ಹಬ್ಬಹರಿದಿನಗಳವಿಶೇಷತೆಯನ್ನು ಅರಿತು ಅದರಲ್ಲಿಬೆರೆತು ಜೀವನವನ್ನುಸುಮಧುರವಾಗಿಸಿಕೊಳ್ಳೋಣ ಆ ನಿಟ್ಟಿನಲ್ಲಿ ಈ ವರುಷದವಸಂತಾಗಮನದ ಯುಗಾದಿನಮ್ಮೆಲ್ಲರಬಾಳಿನಲಿಹೊಸತನದ ಚೈತನ್ಯದೊಂದಿಗೆನವನವೀನವಾದ ಚಿಂತನೆಗಳನ್ನುಹುಟ್ಟುಹಾಕಿ ಪರಸ್ಪರಸ್ನೇಹವಿಶ್ವಾಸದೊಂದಿಗೆ ಜೀವಿಸಿಮನುಕುಲದ ಏಳಿಗೆ ಕಾಣಂವ'ಂತಾಗ'ಲಿ ಎಂದುಭಾವಿಸುತ್ತೇನೆ.....



ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು-
ಮದರಕಲ್ಲ ಕಂದ, ರಾಯಚೂರು
9686976863

ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ಪ.ಪಂ. ಅನುದಾನ ಮೀಸಲಿಡಲು ಪತ್ರಕರ್ತರಿಂದ ಮನವಿ

ಸಿರವಾರ, ಮಾ.18-

ಮುಂಬರುವ ಪಟ್ಟಣ ಪಂಚಾಯತ್ ಬಜೆಟ್ ನಲ್ಲಿ ಪತ್ರಕರ್ತರ ಆರೋಗ್ಯ ವಿಮೆ ಹಾಗೂ ತುರ್ತು ನಿಧಿಗಾಗಿ 10 ಲಕ್ಷ ರೂ. ಅನುದಾನ ಮೀಸಲಿಡುವಂತೆ ಕಾರ್ಯನಿರತ ಪತ್ರಕರ್ತ ಸಂಘದಿಂದ ಪ.ಪಂ.ಅಧ್ಯಕ್ಷ ಹಾಗೂ ಮುಖ್ಯಾಧಿಕಾರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಲಾಯಿತು.

ನಂತರ ಕಾರ್ಯನಿರತ ಪತ್ರಕರ್ತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಹನುಮೇಶ ಮಾತನಾಡಿ, ಪತ್ರಕರ್ತರು ಕಡಿಮೆ ಗೌರವ ಧನದಲ್ಲಿ ಪಟ್ಟಣದ ಅಭಿವೃದ್ದಾಗಿ ಹಗಲಿರುಳು ಕಾರ್ಯನಿರ್ವಹಿಸುತ್ತಿದ್ದಾರೆ. ದೀಪದ ಕೆಳಗೆ ಕತ್ತಲು ಎನ್ನುವಂತೆ ಪತ್ರಕರ್ತರಿಗೆ ಹಾಗೂ ಅವರ



ಕುಟುಂಬಸ್ಥರಿಗೆ ಆರೋಗ್ಯ ಸಮಸ್ಯೆಯಾದಾಗ ಚಿಕಿತ್ಸೆ ಗೆ ಹಣದ ಕೊರತೆ ಎದುರಾಗುತ್ತಿದೆ ಎಂದರು.

ಈ ಹಿಂದೆಯೂ ಸಹ ಪತ್ರಕರ್ತರ ಆರೋಗ್ಯ ವಿಮೆ ಹಾಗೂ ತುರ್ತು ನಿಧಿಗೆ ಸಮರ್ಪಕ ಅನುದಾನ ಮೀಸಲಿಡಲಾಗಿತ್ತು. ಆದರೆ ನಂತರದ ದಿನಗಳಲ್ಲಿ ಅನುದಾನ ಮೀಸಲಿಡದೇ ನಿರ್ಲಕ್ಷ್ಯವಹಿಸಲಾಗಿದೆ. ಹಾಗಾಗಿ ಇದೇ ತಿಂಗಳು 2026-27ನೇ ಸಾಲಿನ ಪಟ್ಟಣ ಪಂಚಾಯತಿ ಬಜೆಟ್ ತಯಾರಿಕೆ ಪೂರ್ವಭಾವಿ ಸಭೆ ನಡೆಯಲಿದ್ದು, ಈ ಬಾರಿಯ ಬಜೆಟ್ ನಲ್ಲಿ ಪತ್ರಕರ್ತರಿಗೆ ಆರೋಗ್ಯ ವಿಮೆ-ತುರ್ತು ಚಿಕಿತ್ಸೆ ಗೆಗಾಗಿ 10 ಲಕ್ಷ ರೂ. ಅನುದಾನ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಅದೇ ರೀತಿ ಪಟ್ಟಣದಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ನೀಡಿದ ನಾಗರಿಕ ಸೌಲಭ್ಯದ ನಿವೇಶನ ಜಾಗಕ್ಕೆ ಸರ್ಕಾರಿ ದರ ನಿಗದಿ ಮಾಡಿದ್ದು ಅದು ಅಧಿಕವಾಗಿರುತ್ತದೆ. ಪತ್ರಕರ್ತರ ಸಂಘಕ್ಕೆ ಯಾವುದೇ ಆದಾಯ ಇರುವುದಿಲ್ಲ. ಆದ್ದರಿಂದ ಮತ್ತೊಮ್ಮೆ ದರ ಪರಿಷ್ಕರಣೆ ಮಾಡಿ ಕಡಿಮೆ ದರ ನಿಗದಿ ಮಾಡುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ನಾಗರಾಜ ಕರಿಬಿಲ್ಕ್ರ್, ಉಪಾಧ್ಯಕ್ಷ ಮಹಮ್ಮದ್ ಅಲಿ, ಖಜಾಂಚಿ ಮೌನೇಶ ಪಾಟೀಲ್, ಕಾರ್ಯದರ್ಶಿ ಮಹೇಶ ಪಾಟೀಲ್, ಜಿಲ್ಲಾ ಸಮಿತಿ ಸದಸ್ಯ ಎಂ.ಗುಂಡಪ್ಪ, ,ಪತ್ರಕರ್ತರಾದ ಪಿ.ಕೃಷ್ಣ, ಸುರೇಶ ಹೀರಾ, ಸೂಗೂರೇಶ ಸ್ವಾಮಿ, ಬಿ.ಮಲ್ಲಪ್ಪ, ಎಸ್.ವಿಜಯಕುಮಾರ್, ಅಪ್ಪಾಜಿ ನಾಯಕ, ಮಹಾಂತೇಶ ಸ್ವಾಮಿ, ಹೊನ್ನಪ್ಪ ಶಾಖಾಪೂರು, ಈರೇಶ ನಾಯಕ ಸೇರಿದಂತೆ ಇತರರು ಇದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR